ಕರ್ನಾಟಕ ವಿಶ್ವವಿದ್ಯಾಲಯ
KARNATAK UNIVERSITY

NAAC Accredited with "A" Grade 2022
ಸಿಂಡಿಕೇಟ ವಿಭಾಗ

ನಂ: ಕವಿವಿ/ಸಿಂಡಿಕೇಟ್/ನಡಾವಳಿಗಳು–44/2024–25/ 09 ದಿನಾಂಕ: 26-06-2024

**"ಗೌಪ್ಯ"**

ಕರ್ನಾಟಕ ವಿಶ್ವವಿದ್ಯಾಲಯದ ವಿಶೇಷ ಸಿಂಡಿಕೇಟ್ ಸಭೆಯನ್ನು **ದಿನಾಂಕ 11 ಜೂನ, 2024** ರಂದು ಮಧ್ಯಾಹ್ನ **03:30 ಗಂಟೆಗೆ** ಕವಿವಿ ಮುಖ್ಯ ಆಡಳಿತ ಕಟ್ಟಡದ ಸಿಂಡಿಕೇಟ್ ಸಭಾ ಭವನದಲ್ಲಿ ಜರುಗಿಸಲಾಯಿತು. ಸಭೆಯ ನಡಾವಳಿಗಳು ಈ ಕೆಳಗಿನಂತಿವೆ.

**ಸಭೆಯಲ್ಲಿ ಈ ಕೆಳಗಿನಂತೆ ಸದಸ್ಯರು ಉಪಸ್ಥಿತರಿದ್ದರು:**

| | | |
|---|---|---|
| 1. | ಪ್ರೊ. ಕೆ. ಬಿ. ಗುಡಸಿ, ಕುಲಪತಿಗಳು, ಕ.ವಿ.ವಿ. ಧಾರವಾಡ | ಅಧ್ಯಕ್ಷರು |
| 2. | ಡಾ. ಪ್ರಕಾಶ ಎಚ್. ಹೊಸಮನಿ., ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಧಾರವಾಡ | ಸದಸ್ಯರು |
| 3. | ಡಾ. ರಾಜೇಂದ್ರ ಎಮ್. ನಾಯಕ, ಡೀನರು, ಕ.ವಿ.ವಿ.ಧಾರವಾಡ (ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 4. | ಶ್ರೀಮತಿ. ಅಂಜನಾ ಎಸ್. ಬಸನಗೌಡರ, ಹುಬ್ಬಳ್ಳಿ | ಸದಸ್ಯರು |
| 5. | ಶ್ರೀಮತಿ. ರತ್ನಾ ಪಾಟೀಲ, ಧಾರವಾಡ | ಸದಸ್ಯರು |
| 6. | ಡಾ. ಚಂದ್ರಶೇಖರ ಲಮಾಣಿ, ಪ್ರಾಚಾರ್ಯರು, ಹಳಿಯಾಳ | ಸದಸ್ಯರು |
| 7. | ಡಾ. ಪ್ರೀತಿ ಬಂಡಾರಕರ, ಪ್ರಾಚಾರ್ಯರು, ಕುಮಟಾ (ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 8. | ಡಾ.(ಶ್ರೀಮತಿ). ಜಯಶ್ರೀ. ಎಸ್., ಹಿರಿಯ ಪ್ರಾಧ್ಯಾಪಕರು, ಕ.ವಿ.ವಿ.ಧಾರವಾಡ | ಸದಸ್ಯರು |
| 9. | ಡಾ. ಎನ್. ವಾಯ್. ಮಟ್ಟಿಹಾಳ, ಕುಲಸಚಿವರು (ಮೌಲ್ಯಮಾಪನ), ಕ.ವಿ.ವಿ. ಧಾರವಾಡ | ಸದಸ್ಯರು |
| 10. | ಡಾ.ಸಿ. ಕೃಷ್ಣಮೂರ್ತಿ, ಪ್ರಭಾರಿ ಹಣಕಾಸು ಅಧಿಕಾರಿಗಳು, ಕ.ವಿ.ವಿ. ಧಾರವಾಡ | ವಿಶೇಷ ಆಹ್ವಾನಿತರು |
| 11. | ಡಾ. ಎ. ಚನ್ನಪ್ಪ, ಕೆಎಎಸ್, ಕುಲಸಚಿವರು(ಆಡಳಿತ). ಕ.ವಿ.ವಿ.ಧಾರವಾಡ | ಸದಸ್ಯ ಕಾರ್ಯದರ್ಶಿಗಳು |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08ಕ್ಕಿಂತ ಹೆಚ್ಚು ಅಂದರೆ 11 ಜನ ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ಮಧ್ಯಾಹ್ನ 03:30 ಗಂಟೆಗೆ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ, ನಂತರ ಸಭೆಯ ಕಲಾಪವನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು



ಕುಲಪತಿಗಳು

**ಕಲಂ ಸಂಖ್ಯೆ-01: ವಿಷಯ-**: 2024-25 ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಸಂಬಂಧಿಸಿದಂತೆ ಬಿ.ಎ. ಮತ್ತು ಬಿ.ಎಸ್ಸಿ. ಪದವಿಗಳಿಗೆ ಮೂರು ವಿಷಯಗಳ Combination ಪ್ರಕಾರ ಮರು ನಿಗದಿಪಡಿಸಿದ ಶುಲ್ಕಗಳ ಬಗ್ಗೆ ಮಾನ್ಯ ಕುಲಪತಿಗಳು ಕೈಗೊಂಡ ನಿರ್ಣಯವನ್ನು ಆಡಳಿತ ಮಂಡಳಿ ದೃಢೀಕರಣಕ್ಕಾಗಿ

ನಿವೇದನೆ:

2024-25ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಪ್ರಕ್ರಿಯೆಯು ದಿನಾಂಕ: 09-05-2024 ರಿಂದ ಪ್ರಾರಂಭವಾಗಿರುತ್ತದೆ. ಸಂಯೋಜನಾ ಪ್ರಕ್ರಿಯೆ ಸಂದರ್ಭದಲ್ಲಿ ಎಂದಿನಂತೆ ಪದವಿಗಳ ವಿಭಾಗವಾರು ಶುಲ್ಕವನ್ನು ನಿಗದಿಪಡಿಸಿ ಅಧಿಸೂಚನೆ ಹೊರಡಿಸಲಾಗಿತ್ತು. ಆದರೆ, ದಿನಾಂಕ: 17-05-2024 ರಂದು ಆನ್‌ಲೈನ್ ಮುಖಾಂತರ ಎಲ್ಲ ಕುಲಪತಿಗಳ ಸಭೆಯಲ್ಲಿ ರಾಜ್ಯ ಸರ್ಕಾರವು ಚರ್ಚಿಸಿದಂತೆ ಬಿ.ಎ. ಮತ್ತು ಬಿ.ಎಸ್ಸಿ. ಪದವಿಗಳಿಗೆ Combination ಪ್ರಕಾರ ಶುಲ್ಕಗಳನ್ನು ಮಾನ್ಯ ಕುಲಪತಿಗಳ ಅನುಮೋದನೆಯೊಂದಿಗೆ ಹಾಗೂ ಸದರಿ ಶುಲ್ಕಗಳ ಬಗ್ಗೆ ಕೈಗೊಂಡ ನಿರ್ಣಯವನ್ನು ಮುಂಬರುವ ಆಡಳಿತ ಮಂಡಳಿಯಿಂದ ದೃಢೀಕರಣಕ್ಕೆ ಒಳಪಟ್ಟಂತೆ ಮರುನಿಗದಿಪಡಿಸಿ ದಿನಾಂಕ: 23-05-2024 ರಂದು ಸುತ್ತೋಲೆ ಮುಖಾಂತರ ಎಲ್ಲ ಮಹಾವಿದ್ಯಾಲಯಗಳಿಗೆ ತಿಳಿಸಲಾಗಿತ್ತು(ಸುತ್ತೋಲೆ-2). ಅದರಂತೆ UUCMS ತಂತ್ರಾಂಶದಲ್ಲಿಯೂ ಕೂಡ ಶುಲ್ಕಗಳನ್ನು ದಾಖಲಿಸಲಾಗಿತ್ತು. ಸದರಿ ಪರಿಷ್ಕೃತ ಶುಲ್ಕಗಳಂತೆ ಸಂಯೋಜನಾ ಪ್ರಕ್ರಿಯೆಯು ಮುಕ್ತಾಯವಾಗಿರುತ್ತದೆ.

ಕಾರಣ, Combination ಪ್ರಕಾರ ಮರು ನಿಗದಿಪಡಿಸಿದ ಶುಲ್ಕಗಳ ಬಗ್ಗೆ ಮಾನ್ಯ ಕುಲಪತಿಗಳು ಕೈಗೊಂಡ ನಿರ್ಣಯವನ್ನು ಆಡಳಿತ ಮಂಡಳಿ ದೃಢೀಕರಣಕ್ಕಾಗಿ ಮಂಡಿಸಲಾಯಿತು.

## ನಿರ್ಣಯ

**2024-25 ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಸಂಬಂಧಿಸಿದಂತೆ ಬಿ.ಎ. ಮತ್ತು ಬಿ.ಎಸ್ಸಿ. ಪದವಿಗಳಿಗೆ ಮೂರು ವಿಷಯಗಳ Combination ಪ್ರಕಾರ ಮರು ನಿಗದಿಪಡಿಸಿದ ಶುಲ್ಕಗಳ ಬಗ್ಗೆ ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಆಡಳಿತ ಮಂಡಳಿ ಸಭೆಯು ಪರಿಶೀಲಿಸಿ ದೃಢೀಕರಿಸಿತು.**

-

-

-

-

-

-

-

-

-

-



ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ-02: ವಿಷಯ-:** 2024-25 ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಸಂಬಂಧಿಸಿದಂತೆ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಎಲ್ಲ ಮಹಾವಿದ್ಯಾಲಯಗಳನ್ನು ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಅಧ್ಯಾಯ 10, ಪರಿಚ್ಛೇಧ 59ರನ್ವಯ ಹಾಗೂ ಸರ್ಕಾರ ನಿಗದಿಪಡಿಸಿದ ಮಾನದಂಡಗಳ ಪ್ರಕಾರ ಸ್ಥಾನಿಕ ವಿಚಾರಣಾ ಸಮಿತಿಗಳ ಶಿಫಾರಸ್ಸು ಮತ್ತು UUCMS ತಂತ್ರಾಂಶದಲ್ಲಿ ನಮೂದಾದ ಅಂಕಗಳ ಆಧಾರದ ಮೇಲೆ ಸಂಯೋಜನೆಗೆ ಸಂಬಂಧಪಟ್ಟ ಪ್ರಕ್ರಿಯೆಗಳ ಅನುಮೋದನೆಗಾಗಿ ಆಡಳಿತ ಮಂಡಳಿಯ ಪರಿಶೀಲನೆಗಾಗಿ

ನಿವೇದನೆ:

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಧಾರವಾಡ, ಗದಗ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸಂಬಂಧಿಸಿದಂತೆ 2024-25ನೇ ಶೈಕ್ಷಣಿಕ ಸಾಲಿನ ಸಂಯೋಜನೆ/ಮುಂದುವರಿಕೆ/ಹೊಸ ಮಹಾವಿದ್ಯಾಲಯ ಪ್ರಾರಂಭಿಸಲು/ಹೊಸ ಪದವಿಗಳನ್ನು ಪ್ರಾರಂಭಿಸಲು/ಹೊಸದಾಗಿ ಶಾಶ್ವತ ಸಂಯೋಜನೆ/ಮಹಾವಿದ್ಯಾಲಯಗಳ ಹೆಸರು ಬದಲಾವಣೆ/ಸ್ಥಳ ಬದಲಾವಣೆ ಹಾಗೂ ಮಹಾವಿದ್ಯಾಲಯಗಳನ್ನು ಸ್ವಯಂ ಮುಚ್ಚುವ ಸಲುವಾಗಿ ಸಲ್ಲಿಸಿದ ಪ್ರಸ್ತಾವನೆಗಳ ಕುರಿತು ಪರಿಶೀಲಿಸಲು ಎಲ್ಲ ಮಹಾವಿದ್ಯಾಲಯಗಳಿಗೆ ಸರ್ಕಾರಿ ಆದೇಶ ಸಂಖ್ಯೆ ಇಡಿ/166/ಯುಎನ್‌ಇ/2023/ಬೆಂಗಳೂರು ದಿನಾಂಕ: 08-05-2024 ರ ಪ್ರಕಾರ ಸರ್ಕಾರ ನಿಗದಿಗೊಳಿಸಿದ ದಿನಾಂಕದೊಳಗಾಗಿ ವಿಚಾರಣಾ ಕಾರ್ಯ ಮುಕ್ತಾಯಗೊಳ್ಳಬೇಕಾಗಿರುವ ಆದೇಶವಿರುತ್ತದೆ. ಕಾರಣ, ಸ್ಥಾನಿಕ ವಿಚಾರಣಾ ಸಮಿತಿಗಳು ಮಹಾವಿದ್ಯಾಲಯಗಳಿಗೆ ಭೇಟಿ ನೀಡಿ UUCMS ತಂತ್ರಾಂಶದಲ್ಲಿ ವರದಿ ಸಲ್ಲಿಸಿದ್ದು ಇರುತ್ತದೆ. ಸದರ ವರದಿಗಳ ಆಧಾರದ ಮೇಲೆ UUCMS ತಂತ್ರಾಂಶದಲ್ಲಿ ಅಂಕಗಳು ನಮೂದಾಗಿರುತ್ತವೆ(ಅನುಬಂಧ).

ಮುಂದುವರೆದು, ಸರ್ಕಾರಿ ಆದೇಶ ಸಂಖ್ಯೆ ಇಡಿ/ಯುಎನ್‌ಇ/2021/ಬೆಂಗಳೂರು ದಿನಾಂಕ: 12-02-2021ರ ಮಾನದಂಡಗಳ ಪ್ರಕಾರ ಸಂಯೋಜನೆ ನವೀಕರಿಸಲು/ಮುಂದುವರೆಸಲು/ಸಂಯೋಜನಾ ವಿಸ್ತರಣೆ ಮತ್ತು ವಿಶ್ವವಿದ್ಯಾಲಯದ ಹಂತದಲ್ಲಿ ನಿಯಮಾನುಸಾರ ಕ್ರಮ ಕೈಕೊಳ್ಳಲು ಅವಶ್ಯವಿರುವ ಅಂಕಗಳು ಈ ಕೆಳಗಿನಂತಿವೆ:

| ಕ್ರಮ ಸಂಖ್ಯೆ | ನಿಗದಿಪಡಿಸಬಹುದಾದ ಸಂಯೋಜನೆಯ ರೀತಿ | ಅವಶ್ಯವಿರುವ ಕನಿಷ್ಠ ಸಂಯೋಜನಾ ಶೇಕಡಾ ಅಂಕಗಳು (%) (ರಿಯಾಯಿತಿ ನಂತರ) |
|---|---|---|
| 01 | ಹೊಸ ಸಂಯೋಜನೆಗಳು | 35 |
| 02 | ಸಂಯೋಜನೆಗಳ ನವೀಕರಣ/ ಮುಂದುವರಿಕೆ/ವಿಸ್ತರಣೆ | 40 |
| 03 | ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳ | 45 |
| 04 | ಹೊಸ ಕೋರ್ಸಗಳ/ಹೊಸ ಕಾಂಬಿನೇಷನ್‌ಗಳ ಮಂಜೂರಾತಿ | 50 |
| 05 | ಹೊಸ ಶಾಶ್ವತ ಸಂಯೋಜನೆಗಳು | 55 |
| 06 | ಶಾಶ್ವತ ಸಂಯೋಜನೆಗಳ ನವೀಕರಣ | 65 |

ಆದ್ದರಿಂದ, ಸ್ಥಾನಿಕ ವಿಚಾರಣಾ ಸಮಿತಿ ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ಅವರು ಸಲ್ಲಿಸಿದ ವರದಿಗಳ ಆಧಾರದ ಮೇಲೆ ಮತ್ತು UUCMS ತಂತ್ರಾಂಶದಲ್ಲಿ ನಮೂದಾಗಿರುವ ಅಂಕಗಳನ್ನು ಪರಿಗಣಿಸಿ ಮಹಾವಿದ್ಯಾಲಯಗಳ ಸಂಯೋಜನೆಗೆ ಸಂಬಂಧಪಟ್ಟ ವಿಷಯಗಳ ಪರಿಶೀಲನೆಗಾಗಿ ಮಂಡಿಸಲಾಯಿತು.

**ನಿರ್ಣಯ**

**2024-25 ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಸಂಬಂಧಿಸಿದಂತೆ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಎಲ್ಲ ಮಹಾವಿದ್ಯಾಲಯಗಳನ್ನು ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಅಧ್ಯಾಯ 10, ಪರಿಚ್ಛೇಧ 59ರನ್ವಯ ಹಾಗೂ ಸರ್ಕಾರ ನಿಗದಿಪಡಿಸಿದ ಮಾನದಂಡಗಳ ಪ್ರಕಾರ ಸ್ಥಾನಿಕ ವಿಚಾರಣಾ ಸಮಿತಿಗಳ ಶಿಫಾರಸ್ಸು ಮತ್ತು UUCMS ತಂತ್ರಾಂಶದಲ್ಲಿ ನಮೂದಾದ ಅಂಕಗಳ ಆಧಾರದ ಮೇಲೆ ಸಂಯೋಜನೆಗೆ ಸಂಬಂಧಪಟ್ಟ ಪ್ರಕ್ರಿಯೆಗಳ ಕುರಿತು ದಿನಾಂಕ 11.06.2024 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು ಹಾಗೂ ಸುರಶೆಟ್ಟಿಕೊಪ್ಪದ ಆಯ್‌ಎಲ್‌ಆರ್‌ಡಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಪ್ರಿಯದರ್ಶಿನಿ ಜ್ಞಾನಸಾಗರ ಸಿರಿ ಬಿ.ಎಸ್.ಡಬ್ಲೂ. ಮಹಾವಿದ್ಯಾಲಯ, ಅರೆಅಂಗಡಿ, ತಾ: ಹೊನ್ನಾವರ ಮಹಾವಿದ್ಯಾಲಯಗಳಲ್ಲಿನ ಮಾನವ ಸಂಪನ್ಮೂಲ ಕೊರತೆ, ವಿದ್ಯಾರ್ಥಿ ಪ್ರಗತಿ, ಮೂಲಭೂತ ಸೌಕರ್ಯಗಳ ಕೊರತೆ ಹಾಗೂ UUCMS ತಂತ್ರಾಂಶದಲ್ಲಿ ಕಡಿಮೆ ಅಂಕ ಪಡೆದಿದ್ದರಿಂದ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪರಿಚ್ಛೇದ 63(1 ರಿಂದ 10) ರಲ್ಲಿ ತಿಳಿಸಿದಂತೆ ನಿಯಮಾನುಸಾರ ಕ್ರಮ ಜರುಗಿಸಲು ನಿರ್ಣಯಿಸಿತು.**



ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–03: ವಿಷಯ–:** ಕರ್ನಾಟಕ ವಿಶ್ವವಿದ್ಯಾಲಯದಿಂದ ಸಂಯೋಜನೆ ಹೊಂದಿದ ಉತ್ತರ ಕನ್ನಡ ಜಿಲ್ಲೆಯ ಪ್ರಿಯದರ್ಶಿನಿ ಜ್ಞಾನಸಾಗರ ಸಿರಿ ಬಿ.ಎಸ್.ಡಬ್ಲ್ಯೂ. ಮಹಾವಿದ್ಯಾಲಯ, ಅರೆಅಂಗಡಿ, ತಾ: ಹೊನ್ನಾವರದಲ್ಲಿ ಮೂಲಭೂತ ಸೌಕರ್ಯ ಇಲ್ಲದಿರುವುದರಿಂದ ಸ್ಥಾನಿಕ ವಿಚಾರಣಾ ಸಮಿತಿ ಮಹಾವಿದ್ಯಾಲಯ ಮುಚ್ಚಲು ಶಿಫಾರಸ್ಸು ಮಾಡುವ ಕುರಿತು.

ನಿವೇದನೆ:

ಉತ್ತರ ಕನ್ನಡ ಜಿಲ್ಲೆಯ ಪ್ರಿಯದರ್ಶಿನಿ ಜ್ಞಾನಸಾಗರ ಸಿರಿ ಬಿ.ಎಸ್.ಡಬ್ಲ್ಯೂ. ಮಹಾವಿದ್ಯಾಲಯ, ಅರೆಅಂಗಡಿ, ತಾ: ಹೊನ್ನಾವರ ಈ ಮಹಾವಿದ್ಯಾಲಯವು 2010 ರಿಂದ ಪ್ರಾರಂಭವಾಗಿದ್ದು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿರುತ್ತದೆ.

ಪ್ರತಿ ವರ್ಷದಂತೆ ಸದರಿ ಮಹಾವಿದ್ಯಾಲಯವು 2024–25ನೇ ಸಾಲಿಗೆ ಸಂಯೋಜನೆ ಮುಂದುವರಿಕೆ ಬಗ್ಗೆ ಅರ್ಜಿ ಸಲ್ಲಿಸಿದ್ದರಿಂದ ನಿಯಮಾನುಸಾರ ಸ್ಥಾನಿಕ ವಿಚಾರಣಾ ಸಮಿತಿಯ ಅಧ್ಯಕ್ಷರಾದ ಡಾ. ಎಸ್.ಎನ್.ಅಗಡಿ ತಮ್ಮ ತಂಡದೊಂದಿಗೆ ಸದರ ಮಹಾವಿದ್ಯಾಲಯಕ್ಕೆ ದಿನಾಂಕ: 06–06–2024 ರಂದು ಭೇಟಿ ನೀಡಿದಾಗ ಕ್ಲಾಸ್ ರೂಮ್‌ನಲ್ಲಿ ದನದ ಕೊಠಡಿಯಂತೆ ಕಂಡುಬಂದಿದ್ದು, ಕೊಠಡಿಗಳಲ್ಲಿ ಮೇವು ಸಂಗ್ರಹಣೆ, ದನದ ಕೊಟ್ಟಿಗೆ ಹಾಗೂ ದನ ಸಾಕಾಣಿಕೆ ಕಂಡು ಬಂದಿದ್ದು, ಕ್ಲಾಸ್ ರೂಮ್‌ನಲ್ಲಿ ಯಾವುದೇ ಶಿಕ್ಷಕರಾಗಲಿ, ವಿದ್ಯಾರ್ಥಿಗಳಾಗಲಿ ಇರುವುದು ಕಂಡು ಬಂದಿಲ್ಲವೆಂದು ವರದಿ ನೀಡಿರುತ್ತಾರೆ. ಸದರ ವರದಿಯನ್ನು ಪ್ರಾಚಾರ್ಯರು ಒಪ್ಪಿಕೊಂಡಿದ್ದು ಇರುತ್ತದೆ(ಅನುಬಂಧ–1). ಸದರ ಮಹಾವಿದ್ಯಾಲಯದ ಪ್ರಾಚಾರ್ಯರೂ ಸಹ ಯಾವುದೇ ಮೂಲಭೂತ ಸೌಕರ್ಯಗಳಿಲ್ಲದಿರುವ ಬಗ್ಗೆ ಲಿಖಿತ ಹೇಳಿಕೆ ನೀಡಿರುತ್ತಾರೆ(ಅನುಬಂಧ–2). ಆದ್ದರಿಂದ, ಸ್ಥಾನಿಕ ವಿಚಾರಣಾ ಸಮಿತಿ ಸದರ ಮಹಾವಿದ್ಯಾಲಯ ಮುಚ್ಚುವ ಬಗ್ಗೆ ಶಿಫಾರಸ್ಸು ಮಾಡಿರುವರು. ಆದರೆ, ಸದರಿ ಮಹಾವಿದ್ಯಾಲಯವು ಸಂಯೋಜನೆ ಮುಂದುವರಿಕೆ ಬಗ್ಗೆ ಅರ್ಜಿ ಸಲ್ಲಿಸಿದ್ದಾರೆ.

ಮೇಲಾಗಿ, ನಿಯಮಾನುಸಾರ ಮಹಾವಿದ್ಯಾಲಯದ ಮಾಹಿತಿಯನ್ನು UUCMS ತಂತ್ರಾಂಶದಲ್ಲಿ ದಾಖಲಿಸಿದಾಗ 2024–25 ನೇ ಸಾಲಿಗೆ ಸದರ ಮಹಾವಿದ್ಯಾಲಯಕ್ಕೆ UUCMS ತಂತ್ರಾಂಶದಲ್ಲಿ 33.19 ಅಂಕಗಳು ಬಂದಿರುತ್ತವೆ(ಅನುಬಂಧ–3). ಆದರೆ, ಸರ್ಕಾರದ ಆದೇಶದ ಸಂಖ್ಯೆ ಇಡಿ/29/ ಯುಎನ್‌ಇ/2021 ದಿನಾಂಕ: 12–02–2021 ರ ಆದೇಶದ ಕಂಡಿಕೆ 8ರಲ್ಲಿ ಸೂಚಿಸಿದಂತೆ ಸಂಯೋಜನೆ ಮುಂದುವರಿಕೆಗೆ UUCMS ತಂತ್ರಾಂಶದಲ್ಲಿ ಕನಿಷ್ಠ 40 ಅಂಕಗಳು ಪಡೆಯುವುದು ಅವಶ್ಯವಾಗಿದ್ದು, 40 ಅಂಕಗಳನ್ನು ಗಳಿಸದಿದ್ದಲ್ಲಿ 02 ವರ್ಷ ಕಾಲಾವಕಾಶ ನೀಡಿ ಭೂಮಿಯೂ ಸೇರಿದಂತೆ Defined Parametersಗಳನ್ನು ಪೂರ್ಣಗೊಳಿಸದಿದ್ದಲ್ಲಿ ಅಂತಹ ಮಹಾವಿದ್ಯಾಲಯದ ಸಂಯೋಜನೆ ರದ್ದುಪಡಿಸಲು ಸೂಚಿಸಿರುತ್ತಾರೆ(ಅನುಬಂಧ–4).

ಮುಂದುವರೆದು, 2023–24ನೇ ಸಾಲಿಗೆ ಸದರ ಮಹಾವಿದ್ಯಾಲಯಕ್ಕೆ UUCMS ತಂತ್ರಾಂಶದಲ್ಲಿ ಕೇವಲ 30 ಅಂಕಗಳು ಮಾತ್ರ ಲಭ್ಯವಾಗಿರುತ್ತದೆ(ಅನುಬಂಧ–5) ಹಾಗೂ ಸದರಿ ಸಾಲಿನಲ್ಲಿ ಮಹಾವಿದ್ಯಾಲಯದ ಸ್ಥಳ ಬದಲಾವಣೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅದರಂತೆ, ಸ್ಥಾನಿಕ ವಿಚಾರಣಾ ಸಮಿತಿಯ ಅಧ್ಯಕ್ಷರಾದ ಡಾ. ಎನ್.ವಾಯ್.ಮಟ್ಟಿಹಾಳ ಇವರ ಶಿಫಾರಸ್ಸಿನ ಮೇರೆಗೆ ವಿದ್ಯಾವಿಷಯಕ್ ಪರಿಷತ್ ಮತ್ತು ಆಡಳಿತ ಮಂಡಳಿಯ ಅನುಮೋದನೆ ಪಡೆದು ಸರ್ಕಾರಕ್ಕೆ ದಿನಾಂಕ: 13–06–2023 ರಂದು ಕಳುಹಿಸಲಾಗಿರುತ್ತದೆ. ಇಲ್ಲಿಯವರೆಗೂ ಸ್ಥಳ ಬದಲಾವಣೆಗೆ ಸರ್ಕಾರವು ಈ ಕೆಳಗಿನ ಕಾರಣ ನೀಡಿ ಅನುಮತಿ ನೀಡಿರುವುದಿಲ್ಲ.

ಅ. ಕನಿಷ್ಠ ವಿಸ್ತೀರ್ಣದ ಜಮೀನು/ಕಾಲೇಜು/ಸಂಸ್ಥೆಯ ಹೆಸರಿನಲ್ಲಿರುವ ಬಗ್ಗೆ ಯಾವುದೇ ಸ್ಪಷ್ಟ ದಾಖಲೆಗಳು ಸಲ್ಲಿಸುವುದು.

ಆ. ಕಟ್ಟಡ ಸುರಕ್ಷತೆ ಮತ್ತು ಅಗ್ನಿ ಸುರಕ್ಷತಾ ಪ್ರಮಾಣ ಪತ್ರಗಳನ್ನು ಸಲ್ಲಿಸುವುದು.

ಇ. ವ್ಯವಸ್ಥಾಪನೆಯಲ್ಲಿ ವರ್ಗಾವಣೆ ಅಥವಾ ಕಾಲೇಜಿನ ಹೆಸರಿನಲ್ಲಿ ಅಥವಾ ಕಾರ್ಯರೀತಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲವೆಂಬ ಮುಚ್ಚಳಿಕೆಯನ್ನು ಸಹ ಸಲ್ಲಿಸುವುದು.

ಸದರ ವಿಷಯವನ್ನು ಸದರಿ ಮಹಾವಿದ್ಯಾಲಯಕ್ಕೆ ದಿನಾಂಕ: 25–09–2023 ರಂದು ಪತ್ರದ ಮುಖಾಂತರ ತಿಳಿಸಲಾಗಿತ್ತು(ಅನುಬಂಧ–6). ಆದರೆ, ಇಲ್ಲಿಯವರೆಗೂ ಈ ಮೇಲಿನ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.

A. Channappa
ಕುಲಸಚಿವರು



ಕುಲಪತಿಗಳು

ಆದ್ದರಿಂದ, ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪರಿಚ್ಛೇಧ 63(1)ಪ್ರಕಾರ ಮಹಾವಿದ್ಯಾಲಯಗಳು ಅವಶ್ಯವುಳ್ಳ ಉಪಬಂಧಗಳನ್ನು ಪಾಲಿಸಲು ವಿಫಲಗೊಂಡ ಸಂದರ್ಭದಲ್ಲಿ ಸಂಯೋಜನೆಯನ್ನು ಭಾಗಶಃ ಅಥವಾ ಪೂರ್ತಿಯಾಗಿ ಹಿಂಪಡೆದುಕೊಳ್ಳುವ ಅವಕಾಶವಿರುತ್ತದೆ ಹಾಗೂ ಸರ್ಕಾರದ ಆದೇಶ ಸಂಖ್ಯೆ ಇಡಿ/29/ಯುಎನ್‌ಇ/2021 ಬೆಂಗಳೂರು ದಿನಾಂಕ: 12-02-2024 ಕಂಡಿಕೆ 8ರ ಪ್ರಕಾರ ಪ್ರಥಮ ವರ್ಷದ ಪದವಿಗಳಿಗೆ ಪ್ರವೇಶಾತಿ ನಿಷಿದ್ಧವಿರುತ್ತದೆ(ಅನುಬಂಧ-7). ವಿದ್ಯಾವಿಷಯಕ್ ಪರಿಷತ್‌ನಲ್ಲಿ ಕೈಗೊಂಡ ನಿರ್ಣಯವನ್ನು ಪರಿಶೀಲಿಸಿ ದೃಢೀಕರಣಕ್ಕಾಗಿ ಆಡಳಿತ ಮಂಡಳಿಯ ಸಭೆಯ ಮುಂದೆ ಮಂಡಿಸಲಾಯಿತು.

## ನಿರ್ಣಯ

ಕರ್ನಾಟಕ ವಿಶ್ವವಿದ್ಯಾಲಯದಿಂದ ಸಂಯೋಜನೆ ಹೊಂದಿದ ಉತ್ತರ ಕನ್ನಡ ಜಿಲ್ಲೆಯ ಪ್ರಿಯದರ್ಶಿನಿ ಜ್ಞಾನಸಾಗರ ಸಿರಿ ಬಿ.ಎಸ್.ಡಬ್ಲ್ಯೂ. ಮಹಾವಿದ್ಯಾಲಯ ಅರೆಅಂಗಡಿ ತಾ: ಹೊನ್ನಾವರದಲ್ಲಿ ಮೂಲಭೂತ ಸೌಕರ್ಯ ಇಲ್ಲದಿರುವುದರಿಂದ ಸ್ಥಾನಿಕ ವಿಚಾರಣಾ ಸಮಿತಿಯು ಮಹಾವಿದ್ಯಾಲಯವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2005 ರ ಪ್ರಕಾರ ಮುಚ್ಚಲು/ಸಂಯೋಜನೆ ಹಿಂಪಡೆಯಲು ವಿದ್ಯಾವಿಷಯಕ್ ಪರಿಷತ್ ಸಭೆಯು ಒಪ್ಪಿ ಅನುಮೋದಿಸಿರುವುದನ್ನು ಸಮಗ್ರವಾಗಿ ಪರಿಶೀಲಿಸಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪರಿಚ್ಛೇದ 63(1 ರಿಂದ 10) ರಲ್ಲಿ ತಿಳಿಸಿದಂತೆ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು.



ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ-04: ವಿಷಯ-:** ಯು.ಜಿ.ಸಿ. ನಿರ್ದೇಶನದಂತೆ ಕೆ.ಎಲ್.ಇ. ಸಂಸ್ಥೆಯ ಪಿ.ಸಿ.ಜಾಬಿನ್ ವಿಜ್ಞಾನ ಮಹಾವಿದ್ಯಾಲಯ, ವಿದ್ಯಾನಗರ, ಹುಬ್ಬಳ್ಳಿ ಇದರ ಸ್ವಾಯತ್ತತೆಯ ಮುಂದುವರಿಕೆ ಅವಧಿಯನ್ನು ಮುಂದಿನ ಹತ್ತು ವರ್ಷಕ್ಕೆ ಅಂದರೆ 2022-23 ರಿಂದ 2031-32ರ ವರೆಗೆ ನೀಡಿದ ಅನುಮೋದನೆಯನ್ನು ಆಡಳಿತ ಮಂಡಳಿಯ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ

ನಿವೇದನೆ:

ಕೆ.ಎಲ್.ಇ. ಸಂಸ್ಥೆಯ ಪಿ.ಸಿ.ಜಾಬಿನ್ ವಿಜ್ಞಾನ ಮಹಾವಿದ್ಯಾಲಯ, ಹುಬ್ಬಳ್ಳಿಯ ಸ್ವಾಯತ್ತತೆ ಮುಂದುವರಿಕೆಯ ಬಗ್ಗೆ ಪರಿಶೀಲಿಸಲು ರಚಿಸಿದ ಸಮಿತಿಯು ನೀಡಿದ ವರದಿಯನುಸಾರ, ಸದರಿ ಮಹಾವಿದ್ಯಾಲಯವು ಸ್ವಾಯತ್ತತೆಯನ್ನು ಮುಂದುವರೆಸಲು ನಿಯಮಾನುಸಾರ ಸಲ್ಲಿಸಿದ ಪ್ರಸ್ತಾವನೆಯನ್ನು ಯು.ಜಿ.ಸಿ. ನವದೆಹಲಿ ಇವರಿಗೆ ದಿನಾಂಕ: 04-07-2022 ರಂದು ಕರ್ನಾಟಕ ವಿಶ್ವವಿದ್ಯಾಲಯದ ಶಿಫಾರಸ್ಸಿನೊಂದಿಗೆ ರವಾನೆ ಮಾಡಲಾಗಿತ್ತು.

ಸದರಿ ಪ್ರಸ್ತಾವನೆಯನ್ನು ಯು.ಜಿ.ಸಿ.ಯು ಅನುಮೋದಿಸಿ ಮುಂದಿನ ಹತ್ತು ವರ್ಷಗಳ ಅವಧಿಯವರೆಗೆ ಅಂದರೆ 2022-23 ರಿಂದ 2031-32ರ ವರೆಗೆ ವಿಸ್ತರಿಸಿ ದಿನಾಂಕ: 24-04-2024 ರಂದು ಅನುಮೋದನೆ ನೀಡಲಾಗಿದ್ದು, (UGC Office No.F.2-102023(AC-Policy) Dated: 24-04-2024) ಸದರಿ ಪತ್ರದಲ್ಲಿ ವಿವರಿಸಿದಂತೆ ಯು.ಜಿ.ಸಿ.ಯಿಂದ ಅನುಮೋದನೆಗೊಂಡ 30 ದಿವಸಗಳ ಒಳಗಾಗಿ ಸ್ವಾಯತ್ತತೆಯನ್ನು ಮುಂದುವರೆಸಿರುವ ಬಗ್ಗೆ ವಿಶ್ವವಿದ್ಯಾಲಯವು ಅಧಿಸೂಚನೆ ನೀಡುವುದು ಕಡ್ಡಾಯವಾಗಿರುತ್ತದೆ.

ಆದ್ದರಿಂದ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಕಲಂ 64(3) ಪ್ರಕಾರ ಸ್ವಾಯತ್ತತೆಯನ್ನು ಮುಂದುವರೆಸಲು ಸರ್ಕಾರದ ಮಂಜೂರಾತಿ ಅವಶ್ಯವಿರುತ್ತದೆ. ಕಾರಣ, ಕೆ.ಎಲ್.ಇ. ಸಂಸ್ಥೆಯ ಪಿ.ಸಿ.ಜಾಬಿನ್ ವಿಜ್ಞಾನ ಮಹಾವಿದ್ಯಾಲಯ, ಹುಬ್ಬಳ್ಳಿಗೆ ಮುಂದಿನ ಹತ್ತು ವರ್ಷಗಳವರೆಗೆ ಸ್ವಾಯತ್ತತೆಯನ್ನು ಮುಂದುವರೆಸುವ ವಿಷಯವನ್ನು ವಿದ್ಯಾವಿಷಯಕ್ ಪರಿಷತ್‌ನಲ್ಲಿ ಕೈಗೊಂಡ ನಿರ್ಣಯವನ್ನು ಪರಿಶೀಲಿಸಿ ಅನುಮೋದಿಸಲು ಆಡಳಿತ ಮಂಡಳಿಯ ಸಭೆಯ ಮುಂದೆ ಮಂಡಿಸಲಾಯಿತು.

<u>ನಿರ್ಣಯ</u>

**ಯು.ಜಿ.ಸಿ. ನಿರ್ದೇಶನದಂತೆ ಕೆ.ಎಲ್.ಇ. ಸಂಸ್ಥೆಯ ಪಿ.ಸಿ.ಜಾಬಿನ್ ವಿಜ್ಞಾನ ಮಹಾವಿದ್ಯಾಲಯ, ವಿದ್ಯಾನಗರ, ಹುಬ್ಬಳ್ಳಿ ಇದರ ಸ್ವಾಯತ್ತತೆಯ ಮುಂದುವರಿಕೆ ಅವಧಿಯನ್ನು ಮುಂದಿನ ಹತ್ತು ವರ್ಷಕ್ಕೆ ಅಂದರೆ 2022-23 ರಿಂದ 2031-32ರ ವರೆಗೆ ನೀಡಿದ ಅನುಮೋದನೆಯನ್ನು ದಿನಾಂಕ 11.06.2024ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯವನ್ನು ಆಡಳಿತ ಮಂಡಳಿಯು ಪರಿಶೀಲಿಸಿ ಅನುಮೋದಿಸಿತು.**

\-

\-

\-

\-

\-

\-

\-

\-



A. Channappa
ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ-05: ವಿಷಯ-:** ಡಾ. ಹೊನ್ನಪ್ಪ ಎಸ್., ಸಹ ಪ್ರಾಧ್ಯಾಪಕರು (ನಿವೃತ್ತ) ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ ಇವರು ತಮ್ಮ ಸೇವಾ ಪುಸ್ತಕದಲ್ಲಿ 18.07.1961 ಎಂದಿದ್ದ ಜನ್ಮ ದಿನಾಂಕವನ್ನು 18.07.1964 ಎಂದು ತಿದ್ದುಪಡಿ ಮಾಡಿ ಕಿರು ರುಜು ಮಾಡಿರುವ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಮೇಲಿನ ವಿಚಾರಣೆಯನ್ನು ಕೈಬಿಟ್ಟು ತಮ್ಮ ಎಲ್ಲ ನಿವೃತ್ತಿ ಸೌಲಭ್ಯಗಳನ್ನು ಬಿಡುಗಡೆಗೊಳಿಸಲು ವಿನಂತಿಸಿ ನೀಡಿರುವ ಮನವಿ ಪತ್ರ ದಿನಾಂಕ 15.02.2024 ರಲ್ಲಿಯ ಅಂಶಗಳಿಗೆ ಸಂಬಂಧಿಸಿದಂತೆ ಕಾನೂನು ಸಲಹೆಗಾರರು ನೀಡಿದ ಕಾನೂನು ಅಭಿಪ್ರಾಯವನ್ನು ಪರಿಶೀಲಿಸಿ ಸದರಿಯವರ ಅಮಾನತ್ತಿನ ಅವಧಿಯ ಬಗ್ಗೆ ನಿರ್ಧರಿಸುವ ಹಾಗೂ ಅವರ ನಿವೃತ್ತಿ ವೇತನ ಮತ್ತು ಅವರ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡುವ ವಿಷಯವನ್ನು ಪರಿಶೀಲಿಸುವ ಕುರಿತು

**ಟಿಪ್ಪಣಿ:**

ದಿನಾಂಕ: 07.03.2024 ರ ಸಿಂಡಿಕೇಟ ಸಭೆಯಲ್ಲಿ, ಡಾ. ಹೊನ್ನಪ್ಪ ಎಸ್. ಸಹ ಪ್ರಾಧ್ಯಾಪಕರು (ನಿವೃತ್ತ) ಇವರು ತಮ್ಮ ಮೇಲಿನ ವಿಚಾರಣೆಯನ್ನು ಕೈಬಿಟ್ಟು ತಮ್ಮ ಎಲ್ಲ ನಿವೃತ್ತಿ ಸೌಲಭ್ಯಗಳನ್ನು ಬಿಡುಗಡೆಗೊಳಿಸಲು ವಿನಂತಿಸಿ ನೀಡಿರುವ ದಿನಾಂಕ 15.02.2024 ರ ಮನವಿ ಪತ್ರದಲ್ಲಿ ನಮೂದಿಸಿದ ಅಂಶಗಳಿಗೆ ಸಂಬಂಧಿಸಿದಂತೆ ನಿಯಮಾನುಸಾರ ಅನುಸರಿಸಬೇಕಾದ ಕ್ರಮಗಳ ಕುರಿತು ಕಾನೂನು ಸಲಹೆಗಾರರು ಅಭಿಪ್ರಾಯವನ್ನು ಪಡೆದು ಮುಂಬರುವ ಸಿಂಡಿಕೇಟ ಸಭೆಗೆ ಮಂಡಿಸಲು ತೀರ್ಮಾನಿಸಿತ್ತು.

ಅದರಂತೆ, ಡಾ. ಹೊನ್ನಪ್ಪ ಎಸ್. ಸಹ ಪ್ರಾಧ್ಯಾಪಕರು (ನಿವೃತ್ತ) ಇವರು ಮನವಿ ಪತ್ರ ದಿನಾಂಕ: 15.02.2023 ರಲ್ಲಿ ನಮೂದಿಸಿದ ಅಂಶಗಳಿಗೆ ಸಂಬಂಧಿಸಿದಂತೆ ನಿಯಮಾನುಸಾರ ಅನುಸರಿಸಬೇಕಾದ ಕ್ರಮಗಳ ಕುರಿತು ಕಾನೂನು ಸಲಹೆಗಾರರು ಈ ಕೆಳಗಿನಂತೆ ತಮ್ಮ ಅಭಿಪ್ರಾಯವನ್ನು ನೀಡಿರುತ್ತಾರೆ.

"Perused the office notes and the decision of Syndicate in the matter of Dr.Honnappa.S. Perused the letter of Dr.Honnappa dt: 15/02/2024. Dr.Honnappa has submitted in his letter that he has not taken any benefit out of said correction in the date of birth and if said act is done due to oversight, he requested to pardon him. He further submitted that due to withholding of retirement benefits, he is facing financial problems and that his wife is suffering from brain tumor for the last 8 years and his children are still studying.

It appears from the letter of Dr. Honnappa that he does not want to contest/deny the charges leveled against him before enquiry committee and therefore he requested to close the matter by accepting his apology and release the retirement benefits.

In his letter, Dr.Honnappa has indirectly admitted the alleged act committed by him. He also begged pardon. Under such circumstances it is not necessary to proceed with further enquiry on the charges leveled against him. The Syndicate has to take necessary action as per rules and in this regard the Syndicate has got ample and discretionary powers.

While imposing penalty in this case as provided under Rule 5, the Disciplinary Authority may consider the following fact and circumstances of case on hand

1) It may be seen that the official has not taken any benefit out of said act of correction in date of birth.

2) No loss or any inconvenience is caused to the University due to alleged act.

3) The official has been already retired from service on superannuation about 6 months back and therefore most of the penal provision under Rule 5 are not applicable.

4) His wife is said to have been bed ridden due to brain tumor and under treatment for the last 8 years.

5) Children are still studying.

Therefore, by considering above facts and circumstances and also on humanitarian grounds the following action appears to be adequate and proper in my opinion.



ಕುಲಸಚಿವರು

ಕುಲಪತಿಗಳು

i) He may be asked to submit an Un-Conditional apology and

ii) He may be censured."

ಮುಂದುವರೆದು, ಇಲ್ಲಿ ನಿವೇದಿಸುವುದೇನೆಂದರೆ, ಡಾ. ಹೊನ್ನಪ್ಪ ಎಸ್., ಸಹ ಪ್ರಾಧ್ಯಾಪಕರು, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ ಇವರು ತಮ್ಮ ಸೇವಾ ಪುಸ್ತಕದಲ್ಲಿ ಜನ್ಮ ದಿನಾಂಕ ತಿದ್ದುಪಡಿ ಮಾಡಿದ ವಿಷಯದ ಬಗ್ಗೆ ಸತ್ಯ ಶೋಧನಾ ಸಮಿತಿಯು ಸಲ್ಲಿಸಿದ ವರದಿ ಆಧಾರದ ಮೇಲೆ ದಿನಾಂಕ 16.11.2022 ರಂದು ಜರುಗಿದ ಸಿಂಡಿಕೇಟ್ ಸಭೆಯು ಕೈಗೊಂಡ ನಿರ್ಣಯ ಹಾಗೂ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಇಲಾಖಾ ವಿಚಾರಣೆ ಕಾಯ್ದಿರಿಸಿ ಮುಂದಿನ ಆದೇಶದವರೆಗೆ ಡಾ. ಹೊನ್ನಪ್ಪ ಎಸ್. ರವರನ್ನು ವಿಶ್ವವಿದ್ಯಾಲಯದಿಂದ ಅಮಾನತ್ತುಗೊಳಿಸಿ ದಿನಾಂಕ 26.12.2022 ರ ಈ ಕಚೇರಿ ಆದೇಶ ಸಂ. ಕವಿವಿ/ಸಿಆಸುವಿ/ಶಿಕ್ಷಕ–06/2022/2423 ನ್ನು ಹೊರಡಿಸಲಾಗಿತ್ತು.

ತದನಂತರ ಡಾ. ಹೊನ್ನಪ್ಪ ಎಸ್. ರವರು ವಿಶ್ವವಿದ್ಯಾಲಯವು ಕೈಗೊಂಡ ಕ್ರಮವನ್ನು ಪ್ರಶ್ನಿಸಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠ, ಧಾರವಾಡ ಇಲ್ಲಿ ದಾಖಲಿಸಿದ ರಿಟ್ ಅರ್ಜಿ ಸಂ. 104254/2022 (ಎಸ್–ಆರ್ಇಎಸ್) ರ ಪ್ರಕರಣದಲ್ಲಿ ದಿನಾಂಕ 26.07.2023 ರಂದು ನೀಡಿದ ಆದೇಶ ಹಾಗೂ ದಿನಾಂಕ 28.07.2023 ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯ ಮತ್ತು ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಬಾಕಿ ವಿಚಾರಣೆ ಕಾಯ್ದಿರಿಸಿ ಸದರಿಯವರನ್ನು ದಿನಾಂಕ 29.07.2023 ರಿಂದ ಅನ್ವಯವಾಗುವಂತೆ ವಿಶ್ವವಿದ್ಯಾಲಯದ ಸೇವೆಗೆ ಪುನಃ ಸ್ಥಾಪಿಸಿ ದಿನಾಂಕ 28.07.2023 ರ ಈ ಕಚೇರಿ ಆದೇಶ ಸಂ. ಕವಿವಿ/ಸಿಆಸುವಿ/ಶಿಕ್ಷಕ–06/2023/884 ನ್ನು ಹೊರಡಿಸಲಾಗಿತ್ತು.

ತದನಂತರ, ಡಾ. ಹೊನ್ನಪ್ಪ ಎಸ್., ಸಹ ಪ್ರಾಧ್ಯಾಪಕರು, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ ಇವರು ದಿನಾಂಕ 31.07.2023 ರಂದು ವಿಶ್ವವಿದ್ಯಾಲಯದಿಂದ ಸೇವೆಯಿಂದ ನಿವೃತ್ತಿ ಹೊಂದಿರುತ್ತಾರೆ. ಆದರೆ ದಿನಾಂಕ 28.07.2023 ರ ಈ ಕಚೇರಿ ಆದೇಶದ ಪ್ರಕಾರ ಸೇವಾ ಪುಸ್ತಕದಲ್ಲಿ ಜನ್ಮ ದಿನಾಂಕ ತಿದ್ದುಪಡಿ ಮಾಡಿದ ವಿಷಯವನ್ನು ಬಾಕಿ ವಿಚಾರಣೆ ಕಾಯ್ದಿರಿಸಿ ಸೇವೆಗೆ ಪುನಃ ಸ್ಥಾಪಿಸಿದ ಹಿನ್ನೆಲೆಯಲ್ಲಿ ಸದರಿಯವರ ನಿವೃತ್ತಿ ತರುವಾಯ ನಿವೃತ್ತಿ ವೇತನ/ನಿವೃತ್ತಿ ಸೌಲಭ್ಯಗಳನ್ನು (GSLIS) ಹೊರತುಪಡಿಸಿ ಮಂಜೂರು ಮಾಡಿರುವುದಿಲ್ಲ.

ಮುಂದುವರೆದು, ದಿನಾಂಕ 30.05.2023 ರಂದುಜರುಗಿದ ಸಿಂಡಿಕೇಟ ಸಭೆಯ ನಿರ್ಣಯ ಸಂಖ್ಯೆ 46 ರಲ್ಲಿ ನಿರ್ಣಯಿಸಿದಂತೆ, ಇಲಾಖಾ ವಿಚಾರಣೆಯ ವರದಿಯನ್ವಯ ತಿದ್ದುಪಡೆ ಮಾಡಲಾಗಿರುವ ದಾಖಲೆಗಳನ್ನು ಕೂಡಲೇ ಫಾರೆನಸಿಕ್ ಲ್ಯಾಬ್ (ವಿಧಿ/ನ್ಯಾಯ ವಿಜ್ಞಾನ) ಟೆಸ್ಟಗಾಗಿ ಕಳುಹಿಸಿಕೊಡಲಾಗಿತ್ತು, ಫಾರೆನಸಿಕ್ ಲ್ಯಾಬ್ (ವಿಧಿ/ನ್ಯಾಯ ವಿಜ್ಞಾನ) ರಾಮತೀರ್ಥನಗರ, ಬೆಳಗಾವಿ ಇವರು ಸಲ್ಲಿಸಿದ ಮುಚ್ಚಿದ ಮೂರು ಲಕೋಟೆಗಳನ್ನು ಸಿಂಡಿಕೇಟ ಸಭೆಯ ಮುಂದೆ ತೆರೆಯಲಾಗಿ, ಈ ಕೆಳಗಿನಂತೆ ವರದಿಯನ್ನು ಸಲ್ಲಿಸಿರುತ್ತಾರೆ:

OPINION

1. The existing questioned figure marked as Q 1 & read as "1964" has been altered from the original figure "1961" by altering "1" to "4" by means of over writing.
2. The existing questioned writings marked as Q2 & read as "Sixty-four" has been altered from the original writings "Sixty-one" by altering "one" to "four" by means of over writing.
3. The existing questioned figure marked as Q3 & read as "1964" has been altered from the original figure "1961" by altering "1" to "4" by means of over writing
4. The existing questioned figure marked as Q4 & read as "1964" has been altered from the original figure "1963" by altering "3" to "1" and further altering "1" by "4"by means of over writing.
5. The existing questioned writings marked as Q5 & read as "Sixty-four" has been altered from the original writings "Sixty-three" by altering "three" to "one" and further altering "one" by "four" by means of striking out the original content.
6. The person who wrote the admitted initial signatures marked as S1 to S175 also wrote the intial questioned signature marked as Q6.

A. Channappa
ಕುಲಸಚಿವರು



ಕುಲಪತಿಗಳು

The existing questioned figure marked as Q7 & read as "1964" has been altered from the original writings "1961" by addition of figure "4" below the original figure "1".

ತದನಂತರ, ಸದರ ವಿಧಿ/ನ್ಯಾಯ ವಿಜ್ಞಾನ ಪ್ರಯೋಗಾಲಯದ ವರದಿಯನ್ನು ದಿನಾಂಕ:22.09.2023 ರಂದು ಜರುಗಿದ ಇಲಾಖಾ ವಿಚಾರಣಾ ಸಮಿತಿಯ ಮುಂದೆ ಮಂಡಿಸಲಾಗಿದ್ದು, ಸದರ ಸಮಿತಿಯು ಪ್ರಯೋಗಾಲಯದ ವರದಿಯನ್ನು ಯಥಾವತ್ತಾಗಿ ಒಪ್ಪಿಕೊಂಡಿದ್ದು, ಸದರ ವರದಿಯ ಆದಾರದ ಮೇಲೆ ಮೇಲಾಧಿಕಾರಿಗಳು ಮುಂದಿನ ಅವಶ್ಯ ಕ್ರಮ ಕೈಗೊಳ್ಳಬಹುದು ಎಂದು ಅಭಿಪ್ರಾಯಿಸಿರುತ್ತದೆ.

1998 ರ ವಿಶ್ವವಿದ್ಯಾಲಯದ ನೌಕರರ ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ ನಿಯಮಗಳ ಅನುಶಾಸನ ಕಂಡಿಕೆ ಸಂ. 5 ಮತ್ತು 8 ರಲ್ಲಿ ನೌಕರರ ಮೇಲೆ ವಿಧಿಸಬಹುದಾದ ದಂಡನೆಗಳ ಕುರಿತು ಈ ಕೆಳಗಿನಂತೆ ಹೇಳಲಾಗಿರುತ್ತದೆ.

5. NATURE OF PENALTIES TO BE IMPOSED:

(1) One or more of the following penalties for good and sufficient reasons be imposed on the employee of the University.

(i) Fine in the case of class-D employees;
(ii) Censure;
(iii) (a) Withholding of increments or promotion;
(b) recovery from the pay of any part OR whole of pecuniary loss caused by negligence or breach of orders.
(iv) (a) reduction to a lower stage in the time scale of pay for specified period with further directions as to whether or not the employee will earn increments during the period of such reduction will or will not have the effect of postponing the future increments of his pay.

(v) reduction to a lower time scale of pay, grade etc. which shall be a bar to his promotion to the post from which he had been reduced with or without further orders regarding;

(a) Seniority and pay in the scale of pay to which he is reduced
(b)Conditions of restoration to the scale of pay from which he was reduced and his seniority and pay on each restoration to that scale of pay;

(vi) Compulsory retirement.
(vii) Removal from service which shall not be a disqualification for future employment.
(viii) Dismissal from University service which disqualifies from future employment.

(2) In the absence of special and adequate reasons, the penalty other than those specified in clauses (iv) and (viii) above shall be imposed for an established charge of corruption coming within the purview of sections 161 and 165 of the Indian penal code.

(8) PROCEDURE FOR IMPOSING MAJOR PENALTIES:
(1) No order imposing any of the major penalties specified in clause (v) to (viii) of Statute (5) shall be made except after an inquiry held in the manner provided in this Statute and Statute 9.

(2) Whenever the Syndicate which is the disciplinary authority in respect of all the employee of the University, is of the opinion that there are grounds for inquiring into the truth of imputation of misconduct or misbehavior against an employee it may itself inquire into the truth of the matter. Such cases of misbehavior in case of class A and B employees shall be reported by the Vice-Chancellor to the Syndicate and in other cases he should take action to conduct necessary inquiry.

ಮುಂದುವರೆದು, ಪ್ರಸ್ತುತವಾಗಿ, ಡಾ. ಹೊನ್ನಪ್ಪ ಎಸ್ ಇವರು ದಿನಾಂಕ: 27.05.2024ರಂದು ಮತ್ತೊಂದು ಮನವಿ ಪತ್ರ ನೀಡಿದ್ದು ಸದರ ಪತ್ರದಲ್ಲಿ ಅವರ ಪತ್ನಿ ಕ್ಯಾನ್ಸರನಿಂದ ಬಳಲುತ್ತಿದ್ದು ಹಾಗೂ ಅವರ ಇಬ್ಬರು ಮಕ್ಕಳು ಉನ್ನತ ವ್ಯಾಸಂಗ



A Channappa
ಕುಲಸಚಿವರು

ಕುಲಪತಿಗಳು

ಮಾಡುತ್ತಿರುವುದರಿಂದ ಕುಟುಂಬದ ನಿರ್ವಹಣೆ ಬಹಳ ಕಷ್ಟಕರವಾಗಿದೆ ಅಂತಾ ತಿಳಿಸಿರುತ್ತಾರೆ. ಮುಂದುವರೆದು ಇತ್ತೀಚಿಗೆ ಅಂದರೆ ದಿನಾಂಕ: 09.05.2024 ರಂದು ತಮ್ಮ ಮಗ ಬೆಂಗಳೂರಿನಲ್ಲಿ ಅಪಘಾತಕ್ಕೀಡಾಗಿದ್ದು ಆಸ್ಪತ್ರೆಯ ಖರ್ಚು ನಿವೃತಿ ಸೌಲಭ್ಯಗಳು ದೊರೆಯದೆ ನಿಸ್ಸಹಾಯಕನಾಗಿರುತ್ತೇನೇ ಎಂದು ತಿಳಿಸುತ್ತಾ, ಅವರ ನಿವೃತ್ತಿ ವೇತನ ಹಾಗೂ ಅವರ ನಿವೃತ್ತಿ ಸೌಲಭ್ಯಗಳನ್ನು ಬಿಡುಗಡೆ ಮಾಡಲು ವಿನಂತಿಸಿರುತ್ತಾರೆ.

ಮೇಲ್ಕಾಣಿಸಿದ ಎಲ್ಲ ಅಂಶಗಳನ್ನು ಅವಲೋಕಿಸಿ, ಕಾನೂನು ಅಭಿಪ್ರಾಯದಂತೆ, ಡಾ. ಹೊನ್ನಪ್ಪ ಎಸ್, ಸಹ ಪ್ರಾಧ್ಯಾಪಕರು (ನಿವೃತ್ತ) ಇವರನ್ನು ಖಂಡಿಸಿ(Censured) ಸದರಿಯವರಿಂದ ಬೇಷರತ್ತಾದ ಕ್ಷಮೆಯನ್ನು (Unconditional apology) ಪಡೆದು ಸದರಿಯವರ ಮನವಿಯಂತೆ ಅವರ ಮೇಲಿನ ವಿಚಾರಣೆಯನ್ನು ಕೈಬಿಟ್ಟು ತಮ್ಮ ಎಲ್ಲ ನಿವೃತ್ತಿ ಸೌಲಭ್ಯಗಳನ್ನು ಬಿಡುಗಡೆಗೊಳಿಸಲು ವಿನಂತಿಸಿ ನೀಡಿರುವ ದಿನಾಂಕ 15.02.2024 ರ ಮನವಿ ಪತ್ರದಲ್ಲಿ ನಮೂದಿಸಿದ ಅಂಶಗಳಿಗೆ ಸಂಬಂಧಿಸಿದಂತೆ ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಪರಿಶೀಲಿಸಿ ಸದರಿಯವರ ಅಮಾನತ್ತಿನ ಅವಧಿಯ ಬಗ್ಗೆ ನಿರ್ಧರಿಸುವ ಹಾಗೂ ಅವರ ನಿವೃತ್ತಿ ವೇತನ ಮತ್ತು ಅವರ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡುವ ವಿಷಯವನ್ನು ಆಡಳಿತ ಮಂಡಳಿಯ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಡಾ. ಹೊನ್ನಪ್ಪ ಎಸ್., ಸಹ ಪ್ರಾಧ್ಯಾಪಕರು (ನಿವೃತ್ತ) ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ ಇವರು ತಮ್ಮ ಸೇವಾ ಪುಸ್ತಕದಲ್ಲಿ 18.07.1961 ಎಂದು ನಮೂದಿಸಿದ ಜನ್ಮ ದಿನಾಂಕವನ್ನು 18.07.1964 ಎಂದು ತಿದ್ದುಪಡಿ ಮಾಡಿ ಕಿರು ರುಜು ಮಾಡಿರುವ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಮೇಲಿನ ವಿಚಾರಣೆಯನ್ನು ಕೈಬಿಟ್ಟು ತಮ್ಮ ಎಲ್ಲ ನಿವೃತ್ತಿ ಸೌಲಭ್ಯಗಳನ್ನು ಬಿಡುಗಡೆಗೊಳಿಸಲು ವಿನಂತಿಸಿ ನೀಡಿರುವ ಮನವಿ ಪತ್ರ ದಿನಾಂಕ 15.02.2024 ರಲ್ಲಿಯ ಅಂಶಗಳಿಗೆ ಸಂಬಂಧಿಸಿದಂತೆ ಕಾನೂನು ಸಲಹೆಗಾರರು ನೀಡಿದ ಕಾನೂನು ಅಭಿಪ್ರಾಯವನ್ನು ಪರಿಶೀಲಿಸಿದ ಸಿಂಡಿಕೇಟ ಸಭೆಯು ಸದರಿ ಪ್ರಕರಣದ ಅಂಶಗಳನ್ನು ಅವಲೋಕಿಸಿ, ಕಾನೂನು ಅಭಿಪ್ರಾಯದಂತೆ, ಡಾ. ಹೊನ್ನಪ್ಪ ಎಸ್, ಸಹ ಪ್ರಾಧ್ಯಾಪಕರು (ನಿವೃತ್ತ) ಇವರನ್ನು ಖಂಡಿಸಿ(Censured) ಸದರಿಯವರಿಂದ ಬೇಷರತ್ತಾದ ಕ್ಷಮೆಯನ್ನು (Unconditional apology) ಪಡೆದು ಸದರೀಯವರ ಅಮಾನತ್ತಿನ ಅವಧಿಯನ್ನು ವೇತನ ರಹಿತ ರಜೆ ಎಂದು ಪರಿಗಣಿಸಲು ಹಾಗೂ ನಿವೃತ್ತಿ ವೇತನ ಮತ್ತು ಸಂಬಂಧಿತ ನಿವೃತ್ತಿ ಸೌಲಭ್ಯಗಳನ್ನು ಮಾನ್ಯ ಸರಕಾರಿ ಲೆಕ್ಕ ಪರಿಶೋಧಕರ ಆಕ್ಷೇಪಣೆಗಳ ಬಗ್ಗೆ ಪರಿಶೀಲಿಸಿ ಬಿಡುಗಡೆಗೊಳಿಸಲು ಸಿಂಡಿಕೇಟ ಠರಾಯಿಸಿತು.**

**ಮುಂದುವರೆದು, ಸದರೀಯವರ ತಮ್ಮ ಸೇವಾ ಪುಸ್ತಕದಲ್ಲಿ ಜನ್ಮ ದಿನಾಂಕ ತಿದ್ದುಪಡಿ ಮಾಡಿದ ದುರ್ವತನೆ ಪರಿಗಣಿಸಿದ ಸಿಂಡಿಕೇಟ ಸದರೀಯವರಿಂದ ಕೆಸಿಎಸ್ ನಿಯಮ 215(2/ಎ) ರಡಿ ರೂ. 02 ಲಕ್ಷಗಳನ್ನು ದಂಡದ ಕ್ರಮವಾಗಿ ಮಂಜೂರು ಮಾಡಬಹುದಾದ ಡಿ.ಸಿ.ಆರ್.ಜಿ ಮೊತ್ತದಲ್ಲಿ ಕಡಿತಗೊಳಿಸಲು ನಿರ್ಣಯಿಸಿತು.**

–

–

–

–

–

–



A. Channap
ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–06: ವಿಷಯ–:** ಸರ್ಕಾರದ ಪತ್ರ ಸಂ. ಇಡಿ/5/ಯುಕೆಎಸ್/2023 ದಿನಾಂಕ 30.08.2023 ರ ನಿರ್ದೇಶನದಂತೆ ಕರ್ನಾಟಕ ವಿಶ್ವವಿದ್ಯಾಲಯದ ಆದಿಕವಿ ಪಂಪ ಅಧ್ಯಯನ ಪೀಠ ಸ್ಥಾಪನೆಗೆ ಸಂಬಂಧಿಸಿದ ಕರಡು ಅನುಶಾಸನದ ಪರಿಷ್ಕೃತ ಪರಿನಿಯಮವನ್ನು ಪರಿಶೀಲಿಸುವ ಕುರಿತು

**ಟಿಪ್ಪಣಿ:**

ಈ ಕಚೇರಿ ಪತ್ರ ಸಂ. ಕವಿವಿ/ಸಿಆಸುವಿ/ಶಿಕ್ಷಕ–4/2023/844 ದಿನಾಂಕ 22.07.2023 ರಂದು ಆದಿಕವಿ ಪಂಪ ಅಧ್ಯಯನ ಪೀಠ ಸ್ಥಾಪನೆ ಬಗೆಗಿನ ಕರಡು ಅನುಶಾಸನವನ್ನು ಸಿದ್ಧಪಡಿಸಿ, ಸರ್ಕಾರದ ಅನುಮೋದನೆ ಪಡೆಯುವ ಸಲುವಾಗಿ ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು ಸದರ ಪತ್ರಕ್ಕೆ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ತಮ್ಮ ಪತ್ರ ಸಂ. ಇಡಿ/5/ಯುಕೆಎಸ್/2023 ದಿನಾಂಕ 30.08.2023 ರಲ್ಲಿ ಸದರ ಪೀಠದ ಕರಡು ಪರಿನಿಯಮಗಳ ಕುರಿತಂತೆ ಕ.ರಾ.ಉ.ಶಿ ಪರಿಷತ್ತಿನೊಂದಿಗೆ ಸಮಾಲೋಚಿಸಿ ಪ್ರಸ್ತಾಪಿಸಿದ ಕರಡು ಪರಿನಿಯಮಗಳಲ್ಲಿ ಕೆಲವು ಅಂಶಗಳನ್ನು ಪರಿಷ್ಕರಿಸುವಂತೆ ನಿರ್ದೇಶಿಸಿರುತ್ತಾರೆ. ಅದರಂತೆ, ಸಂಯೋಜಕರು ಸರ್ಕಾರದ ನಿರ್ದೇಶನದಂತೆ, ಆದಿಕವಿ ಪಂಪ ಅಧ್ಯಯನ ಪೀಠದ ಕರಡು ಅನುಶಾಸನದಲ್ಲಿ ಕೆಲವು ಅಂಶಗಳನ್ನು ತಿದ್ದುಪಡಿ ಮಾಡಿ ಪರಿನಿಯಮದ ಕರಡು ಪ್ರತಿಯನ್ನು ದಿನಾಂಕ 22.09.2023 ರಂದು ಸಲ್ಲಿಸಿರುತ್ತಾರೆ. ಸದರ ತಿದ್ದುಪಡಿ ಮಾಡಲಾದ ಕರಡು ಅನುಶಾಸನದ ಪ್ರತಿಯನ್ನು ಹಣಕಾಸು ಸಮಿತಿ ಸಭೆಯ ಪರಿಶೀಲನೆಗಾಗಿ ಮಂಡಿಸಲಾಗಿದ್ದು, ಸದರ ಸಭೆಯು ಈ ಕೆಳಗಿನಂತೆ ಠರಾಯಿಸಿರುತ್ತದೆ.

**ಹಣಕಾಸು ಸಮಿತಿ ಸಭೆಯ ಕಲಂ ಸಂ. 9 ದಿನಾಂಕ 06.03.2024**

"ಸರ್ಕಾರದ ಪತ್ರ ಸಂ. ಇಡಿ/5/ಯುಕೆಎಸ್/2023 ದಿನಾಂಕ 30.08.2023 ರ ನಿರ್ದೇಶನದಂತೆ ಕರ್ನಾಟಕ ವಿಶ್ವವಿದ್ಯಾಲಯದ ಆದಿಕವಿ ಪಂಪ ಅಧ್ಯಯನ ಪೀಠ ಸ್ಥಾಪನೆಗೆ ಸಂಬಂಧಿಸಿದ ಕರಡು ಅನುಶಾಸನದ ಪರಿಷ್ಕೃತ ಪರಿನಿಯಮವನ್ನು ಹಣಕಾಸು ಸಮಿತಿಯು ಪರಿಶೀಲಿಸಿ ಒಪ್ಪಿಗೆಯನ್ನು ಸೂಚಿಸಿತು."

ಮೇಲ್ಕಾಣಿಸಿದ ಹಣಕಾಸು ಸಮಿತಿ ಸಭೆಯ ನಿರ್ಣಯವನ್ನು ವಿದ್ಯಾವಿಷಯಕ ಪರಿಷತ್ ಪರಿಶೀಲನೆಗಾಗಿ ಮಂಡಿಸಲಾಗಿತ್ತು, ಸದರ ಸಭೆಯು ಈ ಕೆಳಗಿನಂತೆ ನಿರ್ಣಯವನ್ನು ಕೈಗೊಂಡಿರುತ್ತದೆ.

**ವಿದ್ಯಾವಿಷಯಕ್ ಪರಿಷತ್ ಸಭೆಯ ನಿರ್ಣಯ ಸಂ.22 ದಿನಾಂಕ07.03.2024**

"ಸರ್ಕಾರದ ಪತ್ರ ಸಂ.ಇಡಿ/5/ಯುಕೆಎಸ್/2023 ದಿನಾಂಕ:30.08.2023ರ ನಿರ್ದೇಶನದಂತೆ ಕರ್ನಾಟಕ ವಿಶ್ವವಿದ್ಯಾಲಯದ ಆದಿಕವಿ ಪಂಪ ಅಧ್ಯಯನ ಪೀಠ ಸ್ಥಾಪನೆಗೆ ಸಂಬಂಧಿಸಿದ ಕರಡು ಅನುಶಾಸನದ ಪರಿಷ್ಕೃತ ಪರಿನಿಯಮವನ್ನು ಹಣಕಾಸು ಸಮಿತಿ ಸಭೆಯ ಶಿಫಾರಸ್ಸನ್ನು ವಿದ್ಯಾವಿಷಯಕ್ ಪರಿಷತ್ ಸಭೆಯ ಒಪ್ಪಿ ಅನುಮೋದಿಸಿತು"

ಆದುದರಿಂದ, ಸರ್ಕಾರದ ಪತ್ರ ಸಂಖ್ಯೆ:ಇಡಿ/5/ಯುಕೆವಿ/2023 ದಿನಾಂಕ.30.08.2023 ರ ನಿರ್ದೇಶನದಂತೆ, ಕರ್ನಾಟಕ ವಿಶ್ವವಿದ್ಯಾಲಯದ ಆದಿಕವಿ ಪಂಪ ಅಧ್ಯಯನ ಪೀಠ ಸ್ಥಾಪಿಸಲು ಸಿದ್ಧಪಡಿಸಿದ ಕರಡು ಅನುಶಾಸನದ ಪರಿಷ್ಕೃತ ಪರಿನಿಯಮ, ಹಣಕಾಸು ಸಮಿತಿ ಸಭೆಯ ನಿರ್ಣಯ ಮತ್ತು ವಿದ್ಯಾವಿಷಯಕ್ ಪರಿಷತ್ ಸಭೆಯ ನಿರ್ಣಯವನ್ನು ಆಡಳಿತ ಮಂಡಳಿ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು.

**ನಿರ್ಣಯ**

**ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ:ಇಡಿ/5/ಯುಕೆವಿ/2023 ದಿನಾಂಕ.30.08.2023 ರ ನಿರ್ದೇಶನದಂತೆ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಆದಿಕವಿ ಪಂಪ ಅಧ್ಯಯನ ಪೀಠ ಸ್ಥಾಪಿಸಲು ಸಿದ್ಧಪಡಿಸಿದ ಕರಡು ಅನುಶಾಸನದ ಪರಿಷ್ಕೃತ ಪರಿನಿಯಮಗಳಿಗೆ ಸಂಬಂಧಿಸಿದಂತೆ ಹಣಕಾಸು ಸಮಿತಿ ಸಭೆಯ ನಿರ್ಣಯ ಮತ್ತು ವಿದ್ಯಾವಿಷಯಕ್ ಪರಿಷತ್ ಸಭೆಯ ನಿರ್ಣಯಗಳನ್ನು ಆಡಳಿತ ಮಂಡಳಿ ಸಭೆಯು ಪರಿಶೀಲಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸುವಂತೆ ಠರಾಯಿಸಿತು.**



A Channappa
ಕುಲಸಚಿವರು

ಕುಲಪತಿಗಳು

**<u>ಕಲಂ ಸಂಖ್ಯೆ-07: ವಿಷಯ-:</u>** ಮುಖ್ಯ ವೈದ್ಯಾಧಿಕಾರಿಗಳು, ಆರೋಗ್ಯ ಕೇಂದ್ರ, ಕ.ವಿ.ವಿ, ಧಾರವಾಡ ಇವರು 4 ಜನ ಶಿಕ್ಷಕೇತರ ಸಿಬ್ಬಂದಿಗಳಿಗೆ ವೈದ್ಯಕೀಯ ವೆಚ್ಚ ಮಂಜೂರು ಮಾಡಲು ಶಿಫಾರಸ್ಸು ಮಾಡಿದ ಮೊತ್ತ (ರೂ. 1,00,000/-) ಒಂದು ಲಕ್ಷ ರೂಪಾಯಿ ಮೇಲ್ಪಟ್ಟದ್ದಾಗಿದ್ದು, ಸದರಿ ವೈದ್ಯಕೀಯ ವೆಚ್ಚವನ್ನು ಮರು ಪಾವತಿಸುವ ವಿಷಯವನ್ನು ಆಡಳಿತ ಮಂಡಳಿ ಸಭೆಯ ಪರಿಶೀಲನೆಗಾಗಿ ಮಂಡಿಸುವ ಕುರಿತು

**<u>ಪ್ರಸ್ತಾವನೆ:</u>**

ದಿನಾಂಕ : 11.03.2024 ರಂದು ಜರುಗಿದ ವೈದ್ಯಕೀಯ ಮಂಡಳಿಯ ಸಭೆಯು ತನ್ನ ವಿವಿಧ ನಿರ್ಣಯಗಳಲ್ಲಿ ಈ ಕೆಳಗೆ ಕಾಣಿಸಿದ ಶಿಕ್ಷಕೇತರ ನೌಕರರಿಗೆ ಅವರ ಹೆಸರಿನ ಮುಂದೆ ತೋರಿಸಿದಂತೆ ಸರ್ಕಾರದ ದರಪಟ್ಟಿಯ ಅನುಸಾರ ವೈದ್ಯಕೀಯ ಚಿಕಿತ್ಸೆಗೆ ವೆಚ್ಚ ಮಾಡಲಾದ ಮೊತ್ತವನ್ನು ಕಾಲಂ ನಂ. 5 ರಲ್ಲಿ ತೋರಿಸಿದ ನಿರ್ಣಯದ ಅನುಸಾರ ಕಾಲಂ ನಂ. 6 ರಲ್ಲಿ ಕಾಣಿಸಿದಂತೆ ಒಟ್ಟು ಮೊತ್ತವನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡಿರುತ್ತದೆ.

| ಅ. ನಂ. | ಹೆಸರು | ಹುದ್ದೆ | ವಿಭಾಗ | ವೈದ್ಯಕೀಯ ಮಂಡಳಿ ನಿರ್ಣಯ ಸಂ. | ಮಂಜೂರಾದ ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | ಶ್ರೀ ಬಿ. ಆಯ್. ಹಿರೇಗೌಡರ | ಅಧೀಕ್ಷಕರು | ಖರೀದಿ ಮತ್ತು ಸಂಗ್ರಹ | 17 | **1,10,000** |
| 2 | ಶ್ರೀಮತಿ ಸುಮಿತ್ರಾ ಓಲೇಕಾರ | ಸಿಪಾಯಿ | ಕವಿವಿ ಸ್ನಾತಕೋತ್ತರ ಕೇಂದ್ರ, ಕಾರವಾರ | 22 | **1,49,023/-** |
| 3 | ಶ್ರೀಮತಿ ವಿದ್ಯಾ ಎಸ್. ಗುಜ್ಜರ | ಅಧೀಕ್ಷಕರು | ಕ್ರೀಡಾ ವಿಭಾಗ | 23 | **2,39,143/-** |
| 4 | ಶ್ರೀ ಮಂಜುನಾಥ ಹಾಲಗಿ | ಕಿರಿಯ ಸಹಾಯಕರು | ಕವಿವಿ ಮುದ್ರಣಾಲಯ | 25 | **1,94,031/-** |

ವೈದ್ಯಕೀಯ ಮಂಡಳಿಯ ಸಭೆಯು ಮೇಲ್ಕಾಣಿಸಿದ ಶಿಕ್ಷಕೇತರ ಸಿಬ್ಬಂದಿಗಳಿಗೆ ವೈದ್ಯಕೀಯ ವೆಚ್ಚ ಮಂಜೂರು ಮಾಡಲು ಶಿಫಾರಸ್ಸು ಮಾಡಿದ ಮೊತ್ತ (ರೂ. 1,00,000/-) ಒಂದು ಲಕ್ಷ ರೂಪಾಯಿ ಮೇಲ್ಪಟ್ಟದ್ದಾಗಿದ್ದು, ನಿಯಮಗಳನುಸಾರ ಸದರಿ ವೈದ್ಯಕೀಯ ವೆಚ್ಚವನ್ನು ಮರು ಪಾವತಿಸುವ ಕುರಿತ ವಿಷಯವನ್ನು ಆಡಳಿತ ಮಂಡಳಿಯ ಅವಗಾಹನೆಗಾಗಿ ಮಂಡಿಸುವುದು ಅವಶ್ಯಕವಾಗಿರುತ್ತದೆ.

ಮುಂದುವರೆದು, ಕ್ರಮ ಸಂಖ್ಯೆ 3 ಮತ್ತು 4 ರಲ್ಲಿ ಕಾಣಿಸಿದ ಸಿಬ್ಬಂದಿಗಳು ಕವಿವಿ ಸೇವೆಯಲ್ಲಿದ್ದಾಗಲೇ ಮರಣ ಹೊಂದಿರುವ ಕಾರಣ, ವೈದ್ಯಕೀಯ ಮಂಡಳಿ ಸಭೆಯು ಸದರ ಸಿಬ್ಬಂದಿಗಳ ವೈದ್ಯಕೀಯ ವೆಚ್ಚಕ್ಕಾಗಿ ಮಂಜೂರು ಮಾಡಿದ ಮೊತ್ತವನ್ನು ಸದರಿಯವರುಗಳ ವಾರಸುದಾರರಿಗೆ ಸಂದಾಯ ಮಾಡುವುದು ಅವಶ್ಯವಾಗಿರುತ್ತದೆ.

ಕಾರಣ, ಮೆಲ್ಕಾಣಿಸಿದ ಅಂಶಗಳನ್ನು ಅವಲೋಕಿಸಿ, ಮೇಲ್ಕಾಣಿಸಿದ ಶಿಕ್ಷಕೇತರ ಸಿಬ್ಬಂದಿಗಳಿಗೆ ವೈದ್ಯಕೀಯ ವೆಚ್ಚ ಮಂಜೂರು ಮಾಡಲು ಶಿಫಾರಸ್ಸು ಮಾಡಿದ ಮೊತ್ತವನ್ನು ಆಡಳಿತ ಮಂಡಳಿ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು.

<u>ನಿರ್ಣಯ</u>

**ಕ.ವಿ.ವಿ, ಧಾರವಾಡ, ವೈದ್ಯಕೀಯ ಮಂಡಳಿಯ ಶಿಫಾರಸ್ಸಿನಂತೆ 4 ಜನ ಶಿಕ್ಷಕೇತರ ಸಿಬ್ಬಂದಿಗಳಿಗೆ ವೈದ್ಯಕೀಯ ವೆಚ್ಚ ಮಂಜೂರು ಮಾಡಿದ ಮೊತ್ತ (ರೂ. 1,00,000/-) ಒಂದು ಲಕ್ಷ ರೂಪಾಯಿ ಮೇಲ್ಪಟ್ಟದ್ದಾಗಿದ್ದು, ಸದರಿ ವೈದ್ಯಕೀಯ ವೆಚ್ಚವನ್ನು ಮರು ಪಾವತಿಸುವ ವಿಷಯವನ್ನು ಆಡಳಿತ ಮಂಡಳಿ ಸಭೆಯು ಪರಿಶೀಲಿಸಿ ಅನುದಾನ ಲಭ್ಯತೆಗೆ ಅನುಗುಣವಾಗಿ ಪಾವತಿಸಲು ಪ್ರಸ್ತಾವನೆಯನ್ನು ಅಂಗೀಕರಿಸಿತು.**



ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–08: ವಿಷಯ–:** ಮುಖ್ಯ ವೈದ್ಯಾಧಿಕಾರಿಗಳು, ಆರೋಗ್ಯ ಕೇಂದ್ರ, ಕ.ವಿ.ವಿ. ಧಾರವಾಡ ಇವರು ಶ್ರೀ ಮಂಜುನಾಥ ಜಮ್ಮಿಹಾಳ ಇವರಿಗೆ ವೈದ್ಯಕೀಯ ವೆಚ್ಚ ಮಂಜೂರು ಮಾಡಲು ಶಿಫಾರಸ್ಸು ಮಾಡಿದ ಮೊತ್ತ (ರೂ. 1,00,000/–) ಒಂದು ಲಕ್ಷ ರೂಪಾಯಿ ಮೇಲ್ಪಟ್ಟದ್ದಾಗಿದ್ದು, ಸದರಿ ವೈದ್ಯಕೀಯ ವೆಚ್ಚವನ್ನು ಮರು ಪಾವತಿಸುವ ವಿಷಯವನ್ನು ಆಡಳಿತ ಮಂಡಳಿ ಸಭೆಯ ಪರಿಶೀಲನೆಗಾಗಿ ಮಂಡಿಸುವ ಕುರಿತು

**ಪ್ರಸ್ತಾವನೆ:**

ಶ್ರೀ ಮಂಜುನಾಥ ಜಮ್ಮಿಹಾಳ, ಸಹಾಯಕರು, ವಿದ್ಯಾಮಂಡಳ(ಎಸ್&ಟಿ) ವಿಭಾಗ, ಕವಿವಿ ಧಾರವಾಡ ಇವರು ದಿನಾಂಕ 07.11.2023 ಮತ್ತು ದಿನಾಂಕ 27.02.2024 ರಂದು ಅವರ ಮಗಳ ವೈದ್ಯಕೀಯ ಚಿಕಿತ್ಸೆಯನ್ನು ನಾರಾಯಣ ಹಾಸ್ಪಿಟಲ್, ಮುಜುಮದಾರ ಮೆಡಿಕಲ್ ಸೆಂಟರ್, ಬೆಂಗಳೂರಿನಲ್ಲಿ ಪಡೆದುಕೊಂಡಿದ್ದು, ರೂ. 6,37,506 ಹಾಗೂ ರೂ. 3,35,660 ಗಳ ಬಿಲ್ಲುಗಳನ್ನು ಮರುವೆಚ್ಚಕ್ಕಾಗಿ ಸಲ್ಲಿಸಿದ್ದ ಸಂದರ್ಭದಲ್ಲಿ ಸದರ ಬಿಲ್ಲುಗಳನ್ನು ಮುಖ್ಯ ವೈದ್ಯಾಧಿಕಾರಿಗಳು, ಆರೋಗ್ಯ ಕೇಂದ್ರ, ಕ.ವಿ.ವಿ. ಧಾರವಾಡ ಇವರ ಪರಿಶೀಲನೆಗಾಗಿ ಈ ಕಚೇರಿ ಪತ್ರ ಸಂಖ್ಯೆ:3488, ದಿನಾಂಕ: 29.02.2024 ರ ಮೂಲಕ ರವಾನಿಸಲಾಗಿತ್ತು.

ನಂತರ, ದಿನಾಂಕ 11.03.2024 ರಂದು ನಡೆದ ವೈದ್ಯಕೀಯ ಮಂಡಳಿ ಸಭೆಯು ನಿರ್ಣಯ ಸಂಖ್ಯೆ 20 ಮತ್ತು 34 ರಲ್ಲಿ ಶ್ರೀ ಮಂಜುನಾಥ ಜಮ್ಮಿಹಾಳ ಇವರ ಬಿಲ್ಲುಗಳು ಪರಿಶೀಲನೆಯಲ್ಲಿ ಇರುತ್ತದೆ ಎಂದು ತಿಳಿಸಿರುತ್ತದೆ.

ತದನಂತರ, ಮುಖ್ಯ ವೈದ್ಯಾಧಿಕಾರಿಗಳು, ಆರೋಗ್ಯ ಕೇಂದ್ರ, ಕವಿವಿ. ಧಾರವಾಡ ಇವರು ದಿನಾಂಕ 20.03.2024 ರ ಪತ್ರದ ಮೂಲಕ ವೈದ್ಯಕೀಯ ಮಂಡಳಿ ಸಭೆಯ ಪರಿಶೀಲನೆಯಲ್ಲಿದ್ದ ಶ್ರೀ ಮಂಜುನಾಥ ಜಮ್ಮಿಹಾಳ ಇವರ 2 ಬಿಲ್ಲುಗಳನ್ನು ಕೂಲಂಕುಶವಾಗಿ ಪರಿಶೀಲಿಸಿ, ಸದರಿಯವರಿಗೆ **ವೈದ್ಯಕೀಯ ಮಂಡಳಿ ಸಭೆಯ ನಿರ್ಣಯ ಸಂಖ್ಯೆ 20 ರ ಪ್ರಕಾರ ರೂ. 4,14,378/– ಗಳನ್ನು ಹಾಗೂ ನಿರ್ಣಯ ಸಂಖ್ಯೆ 34 ರ ಪ್ರಕಾರ ರೂ. 2,18,179/– ಗಳನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡಿರುತ್ತಾರೆ.**

ಕಾರಣ, ಮುಖ್ಯ ವೈದ್ಯಾಧಿಕಾರಿಗಳು, ಆರೋಗ್ಯ ಕೇಂದ್ರ, ಕ.ವಿ.ವಿ. ಧಾರವಾಡ ಇವರು ಶ್ರೀ ಮಂಜುನಾಥ ಜಮ್ಮಿಹಾಳ ಇವರಿಗೆ ವೈದ್ಯಕೀಯ ವೆಚ್ಚ ಮಂಜೂರು ಮಾಡಲು ಶಿಫಾರಸ್ಸು ಮಾಡಿದ ಮೊತ್ತ (ರೂ. 1,00,000/–) ಒಂದು ಲಕ್ಷ ರೂಪಾಯಿ ಮೇಲ್ಪಟ್ಟದ್ದಾಗಿದ್ದು, ನಿಯಮಗಳನುಸಾರ ಸದರಿ ವೈದ್ಯಕೀಯ ವೆಚ್ಚವನ್ನು ಮರು ಪಾವತಿಸುವ ಕುರಿತ ವಿಷಯವನ್ನು ಆಡಳಿತ ಮಂಡಳಿ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಶ್ರೀ ಮಂಜುನಾಥ ಜಮ್ಮಿಹಾಳ ಇವರ ಮಗಳ ಚಿಕಿತ್ಸೆಗಾಗಿ ಖರ್ಚು ಮಾಡಿದ ವೈದ್ಯಕೀಯ ವೆಚ್ಚ ಮರು ಪಾವತಿಗಾಗಿ ಕ.ವಿ.ವಿ. ಧಾರವಾಡ, ವೈದ್ಯಕೀಯ ಮಂಡಳಿಯ ಶಿಫಾರಸ್ಸು ಮಾಡಿದ ಮೊತ್ತ (ರೂ. 1,00,000/–) ಒಂದು ಲಕ್ಷ ರೂಪಾಯಿ ಮೇಲ್ಪಟ್ಟದ್ದಾಗಿದ್ದು, ಸದರಿ ವೈದ್ಯಕೀಯ ವೆಚ್ಚವನ್ನು ಮರು ಪಾವತಿಸುವ ವಿಷಯವನ್ನು ಆಡಳಿತ ಮಂಡಳಿ ಸಭೆಯು ಪರಿಶೀಲಿಸಿ ಅನುದಾನ ಲಭ್ಯತೆಗೆ ಅನುಗುಣವಾಗಿ ಪಾವತಿಸಲು ಪ್ರಸ್ತಾವನೆಯನ್ನು ಅಂಗೀಕರಿಸಿತು.**

–

–

–



ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ-09: ವಿಷಯ-:** ಸ್ನಾತಕೋತ್ತರ ವಿವಿಧ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸುವ ಕುರಿತು

**ಟಿಪ್ಪಣಿ:**

ಕರ್ನಾಟಕ ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳ ಅಧಿಕಾರದ ಅವಧಿಯು ಈ ಕೆಳಗೆ ನಮೂದಿಸಿದ ದಿನಾಂಕಗಳಂದು ಕೊನೆಗೊಂಡ ಪ್ರಯುಕ್ತ ಸದರಿಯವರಿಂದ ತೆರವಾದ ಸ್ಥಾನದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, 34(5) (7) (8)ರ ಅಡಿಯಲ್ಲಿ, ಜೇಷ್ಠತೆಯ ಅನುಸಾರ ಆಯಾ ವಿಭಾಗಗಳ ಹಿರಿಯ ಶಿಕ್ಷಕರನ್ನು ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡುವುದು ಅವಶ್ಯವಿದ್ದರಿಂದ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ವಿಭಾಗದಿಂದ ಪಡೆದ ವಿವಿಧ ಅಧ್ಯಯನ ವಿಭಾಗಗಳ ಪ್ರಸ್ತುತ ಶಿಕ್ಷಕರ ಜೇಷ್ಠತಾ ಯಾದಿಯ ಪ್ರಕಾರ ಈ ಕೆಳಗಿನ ಶಿಕ್ಷಕರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, 34(5) (7) (8) ಹಾಗೂ ಅಧಿನಿಯಮ 15 (5) ರ ಪ್ರಕಾರ ಮಾನ್ಯ ಕುಲಪತಿಗಳು ಸಿಂಡಿಕೇಟ ಪರವಾಗಿ ತೆಗೆದುಕೊಂಡ ಕ್ರಮದಂತೆ ಆಯಾ ವಿಭಾಗಗಳ ಶಿಕ್ಷಕರ ಜೇಷ್ಠತೆಯ ಅನುಸಾರವಾಗಿ ಅ.ನಂ.1,3,4,5,6ರ ಪ್ರಾಧ್ಯಾಪಕರನ್ನು ಹಾಗೂ ಅ.ನಂ.2ರ ಸಹ-ಪ್ರಾಧ್ಯಾಪಕರುನ್ನು (KU-Syndicate/Dept/Chair/2016-17/157 dated: 01.06.2016) ಮುಖ್ಯಸ್ಥರುಗಳನ್ನಾಗಿ ನೇಮಕ ಮಾಡಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.

| ಅ.ನಂ. | ವಿಭಾಗ | ವಿಭಾಗದ ಮುಖ್ಯಸ್ಥರು (ಈ ಮೊದಲಿನ) | ಮುಖ್ಯಸ್ಥರ ಅವಧಿ ಕೊನೆಗೊಂಡ ಪ್ರಯುಕ್ತ | ಪ್ರಸ್ತುತ ವಿಭಾಗದ ಮುಖ್ಯಸ್ಥರು | ನೇಮಕ ಮಾಡಿದ ದಿನಾಂಕ | ಅಧಿಸೂಚನೆ ಹೊರಡಿಸಿದ ದಿನಾಂಕ |
|---|---|---|---|---|---|---|
| 1) | ತತ್ವಶಾಸ್ತ್ರ ವಿಭಾಗ | ಡಾ. ಕೆ. ವಿ. ಮತ್ತಿಮಠ, ಪ್ರಾಧ್ಯಾಪಕರು | 30-03-2024 | ಡಾ. ಬಸವರಾಜ ಎಚ್. ಗುಜಲಾರ, ಪ್ರಾಧ್ಯಾಪಕರು | 31-03-2024 | 30-03-2024 |
| 2) | ಪ್ರಾಣಿಶಾಸ್ತ್ರ ವಿಭಾಗ | ಡಾ. ಪುಲಕೇಶಿ ಎಮ್. ಬಿರಾದಾರ, ಪ್ರಾಧ್ಯಾಪಕರು | 24-04-2024 | ಡಾ. ಗಿರೀಶ ಜಿ. ಕಂಠದೇವರು, ಸಹ-ಪ್ರಾಧ್ಯಾಪಕರು | 25-04-2024 | 24-04-2024 |
| 3) | ಮಾನವಶಾಸ್ತ್ರ ವಿಭಾಗ | ಡಾ. ಟಿ.ಟಿ. ಬಸವನಗೌಡ, ಪ್ರಾಧ್ಯಾಪಕರು | 27-04-2024 | ಡಾ. ಟಿ.ಟಿ. ಬಸವನಗೌಡ, ಪ್ರಾಧ್ಯಾಪಕರು | 28-04-2024 | 23-04-2024 |
| 4) | ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ | ಡಾ. ಎಸ್. ವಾಯ್. ಮುಗಳಿ, ಪ್ರಾಧ್ಯಾಪಕರು | 30-04-2024 | ಡಾ. ಎಲ್. ಪಿ. ಮಾರುತಿ, ಪ್ರಾಧ್ಯಾಪಕರು | 01-05-2024 | 27-04-2024 |
| 5) | ಗಣಿತಶಾಸ್ತ್ರ ವಿಭಾಗ | ಡಾ. ಪ್ರಕಾಶಗೌಡ ಜಿ. ಪಾಟೀಲ, ಪ್ರಾಧ್ಯಾಪಕರು | 30-04-2024 | ಡಾ. ಎಸ್. ಸಿ. ಶಿರಾಳಶೆಟ್ಟಿ, ಪ್ರಾಧ್ಯಾಪಕರು | 01-05-2024 | 27-04-2024 |
| 6) | ಸಮಾಜಶಾಸ್ತ್ರ ವಿಭಾಗ | ಡಾ. ಶೌಕತ್ ಅಝೀಮ್, ಹಿರಿಯ ಪ್ರಾಧ್ಯಾಪಕರು | 31-05-2024 | ಡಾ. ಧ್ರುವ ಬಿ. ಜ್ಯೋತಿ, ಪ್ರಾಧ್ಯಾಪಕರು | 01-06-2024 | 31-05-2024 |

ಆದ್ದರಿಂದ, ಮೇಲ್ಕಾಣಿಸಿದಂತೆ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರನ್ನು ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

<u>ನಿರ್ಣಯ</u>

ಮಾರ್ಚ 2024 ರಿಂದ ಮೇ 2024 ರವರೆಗೆ ಸ್ನಾತಕೋತ್ತರ ವಿವಿಧ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.



ಕುಲಸಚಿವರು                                                                 ಕುಲಪತಿಗಳು

**ಕಲಂ ಸಂಖ್ಯೆ–10: ವಿಷಯ–**: ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಬಿ.ಎಡ್ ಕೋರ್ಸಿನ ಸಂಯೋಜಿತ ಹಾಗೂ ಘಟಕ ಕಾಲೇಜುಗಳ ಶೈಕ್ಷಣಿಕ ಗುಣಮಟ್ಟವನ್ನು ಸುಧಾರಣೆ ಮಾಡುವ ಕುರಿತು ಸಲಹೆ ಸೂಚನೆಗಳನ್ನು ನೀಡಲು ನೇಮಿಸಿದ ಸಲಹಾ ಸಮಿತಿಯು ನೀಡಿದ ವರದಿಯನ್ನು ಪರಿಶೀಲಿಸುವ ಕುರಿತು

**ಟಿಪ್ಪಣಿ :**

ದಿನಾಂಕ: 16.01.2024 ರಂದು ಜರುಗಿದ ಸಿಂಡಿಕೇಟ್ ನಿರ್ಣಯ ಸಂಖ್ಯೆ–13ರ ಪ್ರಕಾರ ನಿರ್ಣಯಿಸಿದಂತೆ, ಕರ್ನಾಟಕ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಎಲ್ಲ ಬಿ.ಎಡ್ ಕೋರ್ಸಿನ ಸಂಯೋಜಿತ ಹಾಗೂ ಘಟಕ ಕಾಲೇಜುಗಳ ಶೈಕ್ಷಣಿಕ ಗುಣಮಟ್ಟವನ್ನು ಸುಧಾರಣೆ ಮಾಡುವ ಕುರಿತಂತೆ, ವಿಶ್ವವಿದ್ಯಾಲಯಕ್ಕೆ ಸಲಹೆ / ಸೂಚನೆಗಳನ್ನು ನೀಡಲು ಸಿಂಡಿಕೇಟ್ ಸದಸ್ಯರಾದ ಡಾ.(ಶ್ರೀಮತಿ) ಪ್ರೀತಿ ಭಂಡಾರಕರ ಇವರ ಅಧ್ಯಕ್ಷತೆಯಲ್ಲಿ ಮೂವರು ಪ್ರಾಚಾರ್ಯರುಗಳ ಸದಸ್ಯರನ್ನೊಳಗೊಂಡಂತೆ ಸಲಹಾ ಸಮಿತಿಯನ್ನು ಈ ಕೆಳಗಿನಂತೆ ರಚಿಸಲಾಗಿತ್ತು.

1. ಡಾ.(ಶ್ರೀಮತಿ) ಪ್ರೀತಿ ಭಂಡಾರಕರ, ಸಿಂಡಿಕೇಟ್ ಸದಸ್ಯರು – ಅಧ್ಯಕ್ಷರು
2. ಡಾ. ಸದಾಶಿವಪ್ಪ ಎನ್. – ಸದಸ್ಯರು
3. ಡಾ. ಬಿ.ಬಿ.ಹೊಳಗುಂದಿ – ಸದಸ್ಯರು
4. ಡಾ.(ಶ್ರೀಮತಿ) ಪಿ.ಎಸ್.ಗುಡದಾನವೇರಿ – ಸದಸ್ಯರು
5. ಉಪಕುಲಸಚಿವರು – ಸಂಯೋಜಕರು

ದಿನಾಂಕ: 06.03.2024 ರಂದು ಜರುಗಿದ ಸಲಹಾ ಸಮಿತಿಯಲ್ಲಿ ಈ ಕೆಳಗಿನಂತೆ ಸಲಹೆಯುಕ್ತ ವರದಿಯನ್ನು ನೀಡಿದೆ.

1. ಬಿ.ಎಡ್ ಮಹಾವಿದ್ಯಾಲಯಗಳ ಸಂಯೋಜನೆ ಕುರಿತಂತೆ ಸ್ಥಾನಿಕ ತನಿಖಾ ಸಮೀತಿಯು (L.I.C) ಭೇಟಿ ನೀಡಿದ ಸಂದರ್ಭದಲ್ಲಿ NCTE ಮಾನದಂಡಗಳನ್ನು ಕಡ್ಡಾಯವಾಗಿ ಅನುಸರಿ ವರದಿಯಲ್ಲಿ ಸೇರ್ಪಡೆಗೊಳಿಸುವುದು.
2. Board of Moderation ರಚನೆಗೊಳಿಸಿ ಅದರಂತೆ ಕಾರ್ಯಾನುಷ್ಠಾನ ಮಾಡುವುದು.
3. ಎಲ್ಲ ಮಹಾವಿದ್ಯಾಲಯಗಳು ಕಡ್ಡಾಯವಾಗಿ Biometric ಮುಖಾಂತರ ಹಾಜರಾತಿ ನಿರ್ವಹಣೆ ಮಾಡುವುದು ಹಾಗೂ ತರಗತಿಗಳ ಪರೀಕ್ಷಾ ನಿರ್ವಹಣೆಗಾಗಿ ಸಿ.ಸಿ. ಕ್ಯಾಮರಾ ಕಾರ್ಯದ ವ್ಯವಸ್ಥೆ ಗೊಳಿಸುವುದು. ಅದರಂತೆ, ಸದರ Biometric ವರದಿಯು ಪ್ರತಿ ಸೆಮಿಸ್ಟರ್‌ನ ಹಾರ್ಡ ಆ್ಯಂಡ್ ಸಾಫ್ಟ್ ಪ್ರತಿಯನ್ನು ಕಡ್ಡಾಯವಾಗಿ ಪ್ರಾಚಾರ್ಯರು ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವುದು
4. ಪರೀಕ್ಷಾ ಕಾರ್ಯದ ಉಪಯೋಗಕ್ಕಾಗಿ ನಿಗದಿತ ನಮೂನೆಯಂತೆ ಬೋಧಕರ ಜೇಷ್ಠತಾ ಪಟ್ಟಿ ತಯಾರಿಸಿ ಅದರಂತೆ ಕಾರ್ಯಾನುಷ್ಠಾನ ಕೈಗೊಳ್ಳುವುದು (ಮಾದರಿ ಇದರೊಂದಿಗೆ ಲಗತ್ತಿಸಿದೆ)
5. ಪ್ರಾಯೋಗಿಕ ನಿಯೋಜಿತ ಕಾರ್ಯಗಳಿಗೆ ಸಂಬಂಧಿಸಿದಂತೆ GPS ಫೋಟೋ ಕಡ್ಡಾಯಗೊಳಿಸಿ ಪರೀಕ್ಷಾ ವಿಭಾಗಕ್ಕೆ ಪ್ರಾಚಾರ್ಯರು ಸಲ್ಲಿಸುವುದು.
6. ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಹಾಜರಾತಿಗಾಗಿ ಪರೀಕ್ಷಾ ಅರ್ಜಿ ಭರಿಸಲು ಕನಿಷ್ಠ 80 ರಷ್ಟು ಹಾಜರಾತಿ ಕಡ್ಡಾಯ ಇರುವುದರಿಂದ ಬಿ.ಎಡ್ ಕೋರ್ಸಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಕಡ್ಡಾಯವಾಗಿ ಎಲ್ಲ ತರಗತಿಗಳಿಗೆ ಭೌತಿಕವಾಗಿ ಹಾಜರಾಗಿ ಅಗತ್ಯ ಕನಿಷ್ಠ ಹಾಜರಾತಿ ಪೂರೈಸುವುದು ಕಡ್ಡಾಯವಾಗಿದೆ. ಈ ಕುರಿತಂತೆ ಪ್ರಾಚಾರ್ಯರು ಪ್ರಮಾಣೀಕರಿಸುವುದು.

ಸಲಹಾ ಸಮಿತಿ ಸಭೆಯ ಶಿಫಾರಸ್ಸುಗಳ ಪರಿಶೀಲನೆಗಾಗಿ ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಲಾಯಿತು.

## ನಿರ್ಣಯ

**ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಬಿ.ಎಡ್ ಕೋರ್ಸಿನ ಸಂಯೋಜಿತ ಹಾಗೂ ಘಟಕ ಕಾಲೇಜುಗಳ ಶೈಕ್ಷಣಿಕ ಗುಣಮಟ್ಟವನ್ನು ಸುಧಾರಣೆ ಮಾಡುವ ಕುರಿತು ಸಲಹೆ ಸೂಚನೆಗಳನ್ನು ನೀಡಲು ನೇಮಿಸಿದ ಸಲಹಾ ಸಮಿತಿಯು ನೀಡಿದ ವರದಿಯನ್ನು ಆಡಳಿತ ಮಂಡಳಿಯು ಪರಿಶೀಲಿಸಿ ಸದರಿ ಸಲಹಾ ಸಮಿತಿಯ ವರದಿಯನ್ವಯ ಕ್ರಮ ಜರುಗಿಸಲು ಠರಾಯಿಸಿತು.**



A Channapp
ಕುಲಸಚಿವರು

ಕುಲಪತಿಗಳು

**<u>ಕಲಂ ಸಂಖ್ಯೆ–11: ವಿಷಯ–</u>:** ವಿಶ್ವವಿದ್ಯಾಲಯದ ಆವರಣದ ಸೌಲಭ್ಯಗಳ ಸಮಿತಿ ಸಭೆಯ ನಡಾವಳಿಗಳನ್ನು ಪರಿಶೀಲಿಸುವುದು

ಟಿಪ್ಪಣಿ:

ದಿನಾಂಕ 25–1–2024 ರಂದು ಜರುಗಿದ ಆವರಣ ಸೌಲಭ್ಯ ಸಮಿತಿ ಸಭೆಯಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ. "ದಿ:15–7–2022 ರ ಸಿಂಡಿಕೇಟ ಸಭೆಯ ನಿರ್ಣಯ ಸಂಖ್ಯೆ 35 ಕ್ಕೆ ಸಂಬಂಧಿಸಿದಂತೆ ಇ ಮತ್ತು ಪಿ ಮಾದರಿ ವಸತಿಗೃಹಗಳನ್ನು ಮಾತ್ರ ವಿತರಿಸಲು ಆದೇಶದೊಂದಿಗೆ ಕವಿವಿ/ಕೆಸಿಡಿ ಎಫ್ ಮಾದರಿ ವಸತಿಗೃಹಗಳನ್ನು ಗುತ್ತಿಗೆ ಆಧಾರದ ಸಿಬ್ಬಂದಿಗಳಿಗೆ ವಿತರಿಸುವಂತೆ ಮತ್ತು ಸದರಿ ನಿರ್ಣಯವನ್ನು ಪೂರ್ವಾನ್ವಯವಾಗಿ ಜಾರಿಗೊಳಿಸಲು ಮುಂದಿನ ಸಿಂಡಿಕೇಟ ಸಭೆಗೆ ಅನುಮೋದನೆಗೆ ಸಲ್ಲಿಸುವುದು. ಈ ಹಿನ್ನೆಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಪರಿಶೀಲನೆಗಾಗಿ ಸಿಂಡಿಕೇಟ ಸಭೆಗೆ ಮಂಡಿಸಲಾಯಿತು.

## ನಿರ್ಣಯ

**ದಿನಾಂಕ 15–7–2022 ರ ಸಿಂಡಿಕೇಟ ಸಭೆಯ ನಿರ್ಣಯ ಸಂಖ್ಯೆ 35 ಕ್ಕೆ ಸಂಬಂಧಿಸಿದಂತೆ 'ಇ' ಮತ್ತು 'ಪಿ' ಮಾದರಿ ವಸತಿಗೃಹಗಳನ್ನು ಗುತ್ತಿಗೆ ಆಧಾರದ ಸಿಬ್ಬಂದಿಗಳಿಗೆ ವಿತರಿಸುವಂತೆ ನಿರ್ಣಯಿಸಲಾಗಿದ್ದು, ದಿನಾಂಕ 25–1–2024 ರಂದು ಜರುಗಿದ ವಿಶ್ವವಿದ್ಯಾಲಯದ ಆವರಣ ಸೌಲಭ್ಯ ಸಮಿತಿ ಸಭೆಯ ಶಿಫಾರಸ್ಸಿನಲ್ಲಿರುವಂತೆ ಕವಿವಿ/ಕೆಸಿಡಿ ಎಫ್ ಮಾದರಿ ವಸತಿಗೃಹಗಳನ್ನು ಪೂರ್ವಾನ್ವಯವಾಗಿ ಜಾರಿಗೊಳಿಸಿ ಗುತ್ತಿಗೆ ಆಧಾರದ ಸಿಬ್ಬಂದಿಗಳಿಗೆ ವಿತರಿಸುವಂತೆ ಹಾಗೂ ಬಾಡಿಗೆ/ಇತರೆ ನಿಯಮಗಳಿಗೆ ಸಂಬಂಧಿಸಿ ದಿನಾಂಕ 25–1–2024 ರ ವಿಶ್ವವಿದ್ಯಾಲಯದ ಆವರಣ ಸೌಲಭ್ಯ ಸಮಿತಿ ಸಭೆಯ ಶಿಫಾರಸ್ಸು (ಅ.ಸಂಖ್ಯೆ.3) ಹಾಗೂ ದಿನಾಂಕ 15–7–2022 ರ ಸಿಂಡಿಕೇಟ ಸಭೆಯ ನಿರ್ಣಯದಂತೆ ಕ್ರಮ ಜರುಗಿಸಲು ಸಿಂಡಿಕೇಟ ಠರಾಯಿಸಿತು.**

–

–

–

–

–

–

–

–

–

–

–



ಕುಲಸಚಿವರು ಕುಲಪತಿಗಳು

**<u>ಕಲಂ ಸಂಖ್ಯೆ–12: ವಿಷಯ–:</u>** ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯತನ ಮತ್ತು ಬೇಜವಾಬ್ದಾರಿತನ ತೋರಿದ ಪರಿಣಾಮ ಇಲಾಖಾ ವಿಚಾರಣೆ ಬಾಕಿ ಇರಿಸಿ ಸೇವೆಯಿಂದ ಅಮಾನತ್ತುಗೊಳಿಸಿದ ಮಾನ್ಯ ಕುಲಪತಿಗಳ ಆಡಳಿತಾತ್ಮಕ ಕ್ರಮದ ದೃಢೀಕರಣಕ್ಕಾಗಿ ಮಂಡಿಸಿದ ಕುರಿತು.

ಪ್ರಸ್ತಾವನೆ :

ಶ್ರೀ ಪಿ. ನೀಲಕುಮಾರ, ಅಧೀಕ್ಷಕರು, ಕವಿವಿ, ಸ್ನಾತಕೋತ್ತರ ಅಧ್ಯಯನ ಕೇಂದ್ರ, ಗದಗ ಇವರು ಗದಗ ಸ್ನಾತಕೋತ್ತರ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇವರು ಮಾನ್ಯ ಜೆ.ಎಂ.ಎಫ್.ಸಿ. 2ನೇಯ ನ್ಯಾಯಾಲಯ, ಗದಗ ಇಲ್ಲಿ ದಾಖಲಾದ ಪ್ರಕರಣ ಸಂಖ್ಯೆ CC 46/2024 ಕ್ಕೆ ಸಂಬಂಧಿಸಿದಂತೆ, ಕಚೇರಿ ಕೆಲಸ ನಿರ್ವಹಣೆಯಲ್ಲಿನ ನಿರ್ಲಕ್ಷ್ಯತನ ಮತ್ತು ಲೋಪದೋಷಗಳು ಕುರಿತಾದ ಆಪಾದನೆಗಳು ಈ ಕೆಳಗಿನಂತೆ ಇರುತ್ತವೆ.

ಆಪಾದನೆಗಳು:

1) ಕರ್ನಾಟಕ ವಿಶ್ವವಿದ್ಯಾಲಯದ ಅಧ್ಯಯನ ಕೇಂದ್ರ, ಗದಗ ಕ್ಕೆ ಸರ್ಕಾರದಿಂದ ಮಂಜೂರಾದ ಭೂಮಿಯ ದಾಖಲೆಗಳನ್ನು ಸರಿಯಾಗಿ ನಿರ್ವಹಿಸದೇ ಕರ್ತವ್ಯದಲ್ಲಿ ನಿರ್ಲಕ್ಷ್ಯತನವನ್ನು ತೋರಿದ್ದರು.
2) ಸದರಿ ಅಧ್ಯಯನ ಕೇಂದ್ರದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿದ ಜಮೀನಿನಲ್ಲಿ ಅನಧಿಕೃತವಾಗಿ ಗಣಿಗಾರಿಕೆ ನಡೆದಿರುವ ಬಗ್ಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳ ಪತ್ರ ಸಂ: ಗಭೂಇ:ಹಿಭೂವಿ:ಗಜಿಖಿ:ಕಗಗು 2022–23/1572 ದಿನಾಂಕ: 16.12.2022 ರಲ್ಲಿ ಸಂಬಂಧಪಟ್ಟ ಪೋಲಿಸ್ ಠಾಣೆಯಲ್ಲಿ ಮೊಕದ್ದಮೆ ಹೂಡಲು ಸೂಚಿಸಿದರೂ ಸಹಿತ ಮೊಕದ್ದಮೆಯನ್ನು ದಾಖಲು ಮಾಡದೇ ಹಾಗೂ ಕೇಂದ್ರದ ಆಡಳಿತಾಧಿಕಾರಿಗಳಿಗೆ ಮಾಹಿತಿ ನೀಡದೇ ಕರ್ತವ್ಯ ನಿರ್ಲಕ್ಷ್ಯತನವನ್ನು ತೋರಿದ್ದರು.
3) ಅದೇ ರೀತಿ ಭೂವಿಜ್ಞಾನ ಇಲಾಖೆಯ ಅಧಿಕಾರಿಗಳು ಮಾನ್ಯ ಜೆ.ಎಂ.ಎಫ್.ಸಿ. ನ್ಯಾಯಾಲಯ, ಗದಗ ಇಲ್ಲಿ ದಾವೆಯನ್ನು ಹೂಡಿರುವ ಪ್ರಯುಕ್ತ ಅದಕ್ಕೆ ಸಂಬಂಧಪಟ್ಟಂತೆ ಸಮನ್ಸಗಳು ಜಾರಿಯಾದರೂ ಸಹಿತ ಈ ಬಗ್ಗೆ ಕುಲಸಚಿವರಿಗೆ/ವಿಶ್ವವಿದ್ಯಾಲಯದ ಸಕ್ಷಮ ಪ್ರಾಧಿಕಾರಕ್ಕೆ ಮಾಹಿತಿ ನೀಡದೇ ಬೇಜವಾಬ್ದಾರಿಯಿಂದ ವರ್ತಿಸಿ ಕರ್ತವ್ಯಲೋಪ ಎಸಗಿದ್ದು ಇರುತ್ತದೆ..
4) ಈ ಮೇಲೆ ವಿವರಿಸಿದಂತೆ ಕರ್ತವ್ಯ ನಿರ್ವಹಣೆಯಲ್ಲಿ ತೋರಿದ ನಿರ್ಲಕ್ಷ್ಯತನ ಮತ್ತು ಬೇಜವಾಬ್ದಾರಿತನದಿಂದ ಸದರಿ ಪ್ರಕರಣ ಗಂಭೀರ ಸ್ವರೂಪ ಪಡೆದುಕೊಂಡು ಕುಲಸಚಿವರಿಗೆ ನ್ಯಾಯಾಂಗ ಬಂಧನದ ವಾರೆಂಟ್ ಜಾರಿಯಾಗಿದ್ದು ಇರುತ್ತದೆ. ಮುಂದುವರೆದು, ಬಂಧನ ವಾರೆಂಟ್ ಜಾರಿಯಾದ ನಂತರವೂ ಸಹ ಮುಂದೆ ಕೈಗೊಳ್ಳಬೇಕಾದ ಕ್ರಮಗಳು ಅಂದರೆ ಸೂಕ್ತ ದಾಖಲೆಗಳ ಸಲ್ಲಿಸುವಿಕೆ, ನ್ಯಾಯವಾದಿಗಳನ್ನು ಸಂಪರ್ಕಿಸುವುದು, ಅವರು ಸೂಚಿಸುವ ಕ್ರಮಗಳನ್ನು ತೆಗೆದುಕೊಳ್ಳುವುದು, ಕುಲಸಚಿವರಿಗೆ ಮತ್ತು ವಿಶ್ವವಿದ್ಯಾಲಯದ ಸಕ್ಷಮ ಪ್ರಾಧಿಕಾರಗಳಿಗೆ ಸೂಕ್ತ ಮಾಹಿತಿ ನೀಡದೇ ಮೊಬೈಲ್‌ನ್ನು ಸ್ವಿಚ್–ಆಫ್ ಮಾಡಿಕೊಂಡು ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯತನವನ್ನು ತೋರಿಸಿದ್ದಾರೆ.
5) ಬಂಧನ ಆದೇಶದ ನಂತರ ಜಾಮೀನು ಪಡೆಯಲು ಅಗತ್ಯ ದಾಖಲೆಗಳನ್ನು ಒದಗಿಸದೇ ಮತ್ತು ದಿನಾಂಕ : 30.04.2024 ರಂದು ಕುಲಸಚಿವರು ಅಗತ್ಯ ದಾಖಲೆಗಳೊಂದಿಗೆ ನ್ಯಾಯಾಲಯಕ್ಕೆ ಬರಲು ಸೂಚಿಸಿದಾಗಿಯೂ ಸಹ ನ್ಯಾಯಾಲಯಕ್ಕೆ ಬಾರದೇ ಬೇಜವಾಬ್ದಾರಿತನದಿಂದ ಸರ್ಕಾರದ ನೌಕರರಿಗೆ ತಕ್ಕದಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತಾರೆ.
6) ಮುಂದುವರೆದು, ಕುಲಸಚಿವರು ದಿನಾಂಕ : 30.04.2024 ರಂದು ಸ್ನಾತಕೋತ್ತರ ಕೇಂದ್ರ, ಗದಗಕ್ಕೆ ಬೇಟಿ ನೀಡಿದಾಗ ಶ್ರೀ ಪಿ. ನೀಲಕುಮಾರ, ಅಧೀಕ್ಷಕರು ಇವರು ಯಾವುದೇ ರಜೆಯನ್ನು ನೀಡದೆ ಕಚೇರಿ ಕೆಲಸಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿದ್ದು ಕಂಡು ಬಂದಿರುತ್ತದೆ.
7) ಮುಂದುವರೆದು, ಕುಲಸಚಿವರು ಸ್ನಾತಕೋತ್ತರ ಕೇಂದ್ರ, ಗದಗ ಇಲ್ಲಿ ವೀಕ್ಷಣೆ ನಡೆಸುತ್ತಿದ್ದ ಸಂದರ್ಭದಲ್ಲಿ ಕಚೇರಿಯಲ್ಲಿ ಅತ್ಯವಶ್ಯಕವಾಗಿ ಇರಬೇಕಾದಂತಹ ಆವಕ–ಜಾವಕ ವಹಿ, ಚಲನವಲನ ವಹಿಗಳನ್ನು ನಿರ್ವಹಿಸದೇ ಕರ್ತವ್ಯಲೋಪ ಎಸಗಿದ್ದು ಕಂಡು ಬಂದಿರುತ್ತದೆ.

ಈ ಮೇಲ್ಕಂಡ ಆಪಾದನೆಗಳ ಹಿನ್ನಲೆಯಲ್ಲಿ ಗದಗ ಸ್ನಾತಕೋತ್ತರ ಕೇಂದ್ರದ ಆಡಳಿತಾಧಿಕಾರಿಗಳು ದಿನಾಂಕ 30.04.2024 ರಂದು ನೀಡಿರುವ ವರದಿಯನ್ವಯ ಶ್ರೀ ಪಿ. ನೀಲಕುಮಾರ, ಅಧೀಕ್ಷಕರು, ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಗದಗ ಇವರು ಕಚೇರಿ ಕೆಲಸವನ್ನು ನಿರ್ವಹಿಸುವಲ್ಲಿ ತೋರಿದ ನಿರ್ಲಕ್ಷ್ಯತನ ಮತ್ತು ಬೇಜವಾಬ್ದಾರಿತನದಿಂದಾಗಿ ಕುಲಸಚಿವರ ವಿರುದ್ಧ ಬಂದನ ವಾರೆಂಟ್ ನಂತರ ಗಂಭೀರ ಕ್ರಮ ಎದುರಿಸುವಂತಹ ಸನ್ನಿವೇಷಗಳು ಸೃಷ್ಟಿಯಾಗಿದ್ದು ಮತ್ತು ಇದರಿಂದ ಕುಲಸಚಿವರು ಮಾನ್ಯ ನ್ಯಾಯಾಲಯದಲ್ಲಿ ಮುಜುಗರವನ್ನು ಅನುಭವಿಸಿದ್ದು ಇರುತ್ತದೆ. ಶ್ರೀ ಪಿ. ನೀಲಕುಮಾರ, ಅಧೀಕ್ಷಕರು ಇವರ ಈ ರೀತಿಯ ನಡತೆಯು ಕರ್ನಾಟಕ ವಿಶ್ವವಿದ್ಯಾಲಯದ ನೌಕರರ (ನಡತೆ) ನಿಯಮಗಳು, 1993 ರ ನಿಯಮ 3 ಕ್ಕೆ ವ್ಯತಿರಿಕ್ತವಾಗಿರುವುದರಿಂದ ಕರ್ನಾಟಕ ವಿಶ್ವವಿದ್ಯಾಲಯದ ನೌಕರರ ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ ನಿಯಮಗಳು 1998 ರ ಭಾಗ–4 ಉಪನಿಯಮ 5(4) ರ ಪ್ರಕಾರ ಇಲಾಖಾ ವಿಚಾರಣೆಯನ್ನು ಬಾಕಿಯಿರಿಸಿ ಮತ್ತು ಸಿಂಡಿಕೇಟ್ ಸಭೆಯ ದೃಢೀಕರಣಕ್ಕೊಳಪಟ್ಟು ತಕ್ಷಣದಿಂದ ಜಾರಿಗೆ ಬರುವಂತೆ



ಕುಲಸಚಿವರು

ಕುಲಪತಿಗಳು

ಶ್ರೀ ಪಿ. ನೀಲಕುಮಾರ, ಅಧೀಕ್ಷಕರು, ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಗದಗ ಅದ ಇವರನ್ನು ವಿಶ್ವವಿದ್ಯಾಲಯದ ಸೇವೆಯಿಂದ ಅಮಾನತ್ತುಗೊಳಿಸಲು ನಿರ್ದರಿಸಿದ ಮಾನ್ಯ ಕುಲಪತಿಗಳ ಆಡಳಿತಾತ್ಮಕ ನಿರ್ಣಯದ ಅನುಸಾರ ಶ್ರೀ ಪಿ ನೀಲಕುಮಾರ ಇವರನ್ನು ಅಮಾನತ್ತುಗೊಳಿಸಿದ ಕ್ರಮವನ್ನು ಸಿಂಡಿಕೇಟ್ ಸಭೆಯ ಧೃಡೀಕರಣಕ್ಕಾಗಿ ಮಂಡಿಸಲಾಯಿತು.

## ನಿರ್ಣಯ

ಶ್ರೀ ಪಿ. ನೀಲಕುಮಾರ, ಅಧೀಕ್ಷಕರು, ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಗದಗ ಇವರು ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯತನ ಮತ್ತು ಬೇಜವಾಬ್ದಾರಿತನ ತೋರಿದ ಪರಿಣಾಮ ಇಲಾಖಾ ವಿಚಾರಣೆ ಬಾಕಿ ಇರಿಸಿ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಿದ ಮಾನ್ಯ ಕುಲಪತಿಗಳ ಆಡಳಿತಾತ್ಮಕ ಕ್ರಮವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಧೃಢೀಕರಿಸಿತು.



ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ-13: ವಿಷಯ-:** ದಿನಾಂಕ.01.04.2006 ರಂದು ಮತ್ತು ನಂತರ ವಿಶ್ವವಿದ್ಯಾಲಯದಲ್ಲಿನ ಹುದ್ದೆಗೆ ನೇಮಕಗೊಂಡು ಸಲ್ಲಿಸುತ್ತಿರುವ ಬೋಧಕ ಸಿಬ್ಬಂದಿಯವರ ಸೇವೆಯನ್ನು ದಿನಾಂಕ 12.07.2007 ರ ಸರ್ಕಾರದ ಅಧಿಕೃತ ಜ್ಞಾಪನ ಪತ್ರ ಸಂ. FD (Spl) 01 PEN 2007 ರ ಆಧಾರದ ಮೇಲೆ (OPS) ಹಳೆ ಪಿಂಚಣಿ ಸೌಲಭ್ಯದಡಿಯಲ್ಲಿ ಪರಿಗಣಿಸಿದ ಕ್ರಮಕ್ಕೆ ಸಂಬಂಧಿಸಿದಂತೆ, ಮಾನ್ಯ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ದಿನಾಂಕ 12.04.2023 ರ ಸರ್ಕಾರದ ಪತ್ರ ಸಂ. ಇಡಿ 44 ಯುಕೆವಿ 2020 ರಲ್ಲಿ ನೀಡಿದ ನಿರ್ದೇಶನದ ವಿಷಯವಾಗಿ ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ವಿಭಾಗಗಳ/ಘಟಕ ಮಹಾವಿದ್ಯಾಲಯಗಳ ಸೇವಾನಿರತ/ನಿವೃತ್ತಿ ಹೊಂದಿದ ಹಾಗೂ ಅಧ್ಯಕ್ಷರು, ಸ್ನಾತಕೋತ್ತರ ಶಿಕ್ಷಕ ಸಂಘಗಳು ಇವರು ಸಲ್ಲಿಸಿದ ಮನವಿಗಳಲ್ಲಿನ ವಿಷಯವನ್ನು ಪರಿಶೀಲಿಸುವ ಕುರಿತು

**ಟಿಪ್ಪಣಿ**

ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ವಿಭಾಗಗಳ/ಘಟಕ ಮಹಾವಿದ್ಯಾಲಯಗಳ ಸೇವಾ ನಿರತ/ನಿವೃತ್ತಿ ಹೊಂದಿದ ಹಾಗೂ ಅಧ್ಯಕ್ಷರು, ಸ್ನಾತಕೋತ್ತರ ಶಿಕ್ಷಕ ಸಂಘಗಳು ಇವರು ಸಲ್ಲಿಸಿದ ಈ ಕೆಳಕಂಡ ಅಂಕಣ ಸಂಖ್ಯೆ.4 ರಲ್ಲಿ ಕಾಣಿಸಿದ ವಿವಿಧ ದಿನಾಂಕಗಳ ಮನವಿ ಪತ್ರಗಳನ್ನು ಅವಗಾಹನೆಗಾಗಿ ಮಂಡಿಸಲಾಗಿದೆ.

| ಅ.ಸಂ. | ಬೋಧಕ ಸಿಬ್ಬಂದಿ ಹೆಸರು | ಪದನಾಮ ಮತ್ತು ವಿಭಾಗ | ಮನವಿ ಪತ್ರ ದಿನಾಂಕ |
|---|---|---|---|
| 1. | ಡಾ.ಎನ್.ರಾಮಾಂಜನೇಯಲು | ಪ್ರಾಧ್ಯಾಪಕರು, ಕೌಶಲ ವ್ಯವಹಾರ ನಿರ್ವಹಣೆ | 24.02.2024 |
| 2. | ಡಾ.ಎನ್.ರಾಮಾಂಜನೇಯಲು | ಅಧ್ಯಕ್ಷರು, ವಿಶ್ವವಿದ್ಯಾಲಯ ಸ್ನಾತಕೋತ್ತರ ಶಿಕ್ಷಕರ ಸಂಘ | 27.02.2024 |
| 3. | ಶಿಕ್ಷಕ ಸಮೂಹ | -- | 27.02.2024 |
| 4. | ಡಾ.ಸುಭಾಷಚಂದ್ರ ನಾಟೀಕಾರ | ಅಧ್ಯಕ್ಷರು, ವಿಶ್ವವಿದ್ಯಾಲಯ ಪ.ಜಾ/ಪ.ಪಂ. ಸ್ನಾತಕೋತ್ತರ ಶಿಕ್ಷಕರ ಸಂಘ | 27.02.2024 |
| 5. | ಡಾ.ರಮೇಶ ಆರ್. ನಾಯಕ | ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ | 27.02.2024 |
| 6. | ಡಾ.ಕೃಷ್ಣ ನಾಯಕ | ಪ್ರಾಧ್ಯಾಪಕರು, ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ | 28.02.2024 |
| 9. | ಡಾ.(ಶ್ರೀಮತಿ).ಅನಸೂಯ ಕ. ಕಾಂಬಳೆ | ಸಹಾಯಕ ಪ್ರಾಧ್ಯಾಪಕರು, ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ | 29.02.2024 |
| 10. | ಡಾ.ಎಸ್.ಎನ್.ಅಗಡಿ | ಪ್ರಾಧ್ಯಾಪಕರು, ಸ್ನಾತಕೋತ್ತರ ಸಸ್ಯಶಾಸ್ತ್ರ ವಿಭಾಗ | 28.02.2024 |
| 11. | ಡಾ.ಆರ್.ಎಫ್.ಭಜಂತ್ರಿ | ಪ್ರಾಧ್ಯಾಪಕರು, ಸ್ನಾತಕೋತ್ತರ ಭೌತಶಾಸ್ತ್ರ ವಿಭಾಗ | 29.02.2024 |
| 12. | ಡಾ.ಪಿ.ಎಮ್.ರತ್ನಾಕರ | ಪ್ರಾಧ್ಯಾಪಕರು, ಸ್ನಾತಕೋತ್ತರ ರಾಜ್ಯಶಾಸ್ತ್ರ ವಿಭಾಗ | 29.02.2024 |
| 13. | ಡಾ.ಧ್ರುವ ಬಿ. ಜ್ಯೋತಿ | ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಶಾಸ್ತ್ರ ವಿಭಾಗ | 29.02.2024 |
| 14. | ಡಾ.(ಶ್ರೀಮತಿ).ಚಂದ್ರಮ್ಮ.ಎಮ್., | ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ವಿಭಾಗ | 02.03.2024 |
| 15. | ಡಾ.ಪಿ.ಎಂ.ಪಾಟೀಲ | ಪ್ರಾಧ್ಯಾಪಕರು (ನಿವೃತ್ತ), ಸ್ನಾತಕೋತ್ತರ ಗಣಿತಶಾಸ್ತ್ರ ವಿಭಾಗ | 04.03.2024 |
| 16. | ಡಾ.ಎಸ್.ಬಿ.ಪಾಟೀಲ | ಗ್ರಂಥಪಾಲರು (ನಿವೃತ್ತ), ಕವಿವಿ ಗ್ರಂಥಾಲಯ | 04.03.2024 |
| 17. | ಡಾ.ರಂಗರಾಜು ಡಿ., | ಪ್ರಾಧ್ಯಾಪಕರು (ನಿವೃತ್ತ), ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ | 04.03.2024 |
| 18. | ಡಾ.ಎ.ಜಿ.ಉಗಾರಕರ | ಪ್ರಾಧ್ಯಾಪಕರು (ನಿವೃತ್ತ), ಸ್ನಾತಕೋತ್ತರ ಭೂವಿಜ್ಞಾನ ವಿಭಾಗ | 02.03.2024 |
| 19. | ಡಾ.ಜಿ.ಬಿ.ನಂದನ | ಪ್ರಾಧ್ಯಾಪಕರು (ನಿವೃತ್ತ), ಸ್ನಾತಕೋತ್ತರ ರಾಜ್ಯಶಾಸ್ತ್ರ ವಿಭಾಗ | 02.03.2024 |
| 20. | ಡಾ.ಡಿ.ಮುರಹರನಾಯ್ಡು | ಪ್ರಾಧ್ಯಾಪಕರು (ನಿವೃತ್ತ), ಸ್ನಾತಕೋತ್ತರ ಮಾನವಶಾಸ್ತ್ರ ವಿಭಾಗ | 02.03.2024 |
| 21. | ಡಾ.ಪಿ.ಎಂ.ಹೊನಕೇರಿ | ಪ್ರಾಧ್ಯಾಪಕರು (ನಿವೃತ್ತ), ಸ್ನಾತಕೋತ್ತರ ಅರ್ಥಶಾಸ್ತ್ರ ವಿಭಾಗ | 02.03.2024 |



ಕುಲಸಚಿವರು

ಕುಲಪತಿಗಳು

| | | | |
|---|---|---|---|
| 22. | ಡಾ.ಧನವಂತ ಹಾಜವಗೋಳ | ಪ್ರಾಧ್ಯಾಪಕರು (ನಿವೃತ್ತ), ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ | 02.03.2024 |
| 23. | ಶ್ರೀಮತಿ.ಎನ್.ವಿ.ಸಾಂಬ್ರಾಣಿ W/o ದಿವಂಗತ ಡಾ.ವಿ.ಎನ್.ಸಾಂಬ್ರಾಣಿ, ಪ್ರಾಧ್ಯಾಪಕರು, ಕೌಶಾಳಿ ವ್ಯವಹಾರ ಅಧ್ಯಯನ ಸಂಸ್ಥೆ | ಸಿಆಸು ವಿಭಾಗ | 01.03.2024 |
| 24. | ಬಿ.ಈರಯ್ಯ | ಪ್ರಾಧ್ಯಾಪಕರು, ಸ್ನಾತಕೋತ್ತರ ಭೌತಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು | 08.03.2024 |
| 25. | ಡಾ.ಕಿರಣ ಕುಮಾರ ಸಿ., | ಸಹ ಪ್ರಾಧ್ಯಾಪಕರು, ಬಿಬಿಎ ವಿಭಾಗ, ಕವಿವಿ, ಧಾರವಾಡ | 27.02.2024 |
| 26. | ಡಾ.ಎಸ್.ಎಸ್.ಮಂಗಳವೇಡೆ | ಸಹಾಯಕ ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ವಿಭಾಗ, ಕವಿವಿ, ಧಾರವಾಡ | 26.02.2024 |
| 27. | ಡಾ.(ಶ್ರೀಮತಿ).ಕೀರ್ತಿ ಅಷ್ಟಗಿಮಠ | ಸಹ ಪ್ರಾಧ್ಯಾಪಕರು, ಸಂಖ್ಯಾಶಾಸ್ತ್ರ ವಿಭಾಗ, ಕವಿವಿ, ಧಾರವಾಡ | 28.02.2024 |
| 28. | ಡಾ.(ಶ್ರೀಮತಿ).ನಿರುಪಮಾ.ಜೆ.ಎಂ., | ಸಹಾಯಕ ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ, ಕವಿವಿ, ಧಾರವಾಡ | 29.02.2024 |
| 29. | ಡಾ.ಎಮ್.ಎನ್.ಮೇಗೇರಿ | ಪ್ರಾಧ್ಯಾಪಕರು, ಸಂಖ್ಯಾಶಾಸ್ತ್ರ ವಿಭಾಗ, ಕವಿವಿ, ಧಾರವಾಡ | 29.02.2024 |

ಸದರ ಮನವಿ ಪತ್ರಗಳಲ್ಲಿ ಮೇಲ್ಕಂಡ ಕೆಲ ಬೋಧಕ ಸಿಬ್ಬಂದಿಯವರು ನೇಮಕಾತಿಗಾಗಿ ವಿಶ್ವವಿದ್ಯಾಲಯ ಹೊರಡಿಸಿದ ಅಧಿಸೂಚನೆಗಳಲ್ಲಿ ದಿನಾಂಕ.01.04.2006 ಕ್ಕಿಂತ ಪೂರ್ವದಲ್ಲಿ ಸೇವೆ ಸಲ್ಲಿಸುತ್ತಿದ್ದ ಸಿಬ್ಬಂದಿಗಳು ನೇಮಕಾತಿ ಹೊಂದಿದಲ್ಲಿ ಸದರಿ ಸಿಬ್ಬಂದಿಗಳನ್ನು ಹೊಸ ಪಿಂಚಣಿ ಯೋಜನೆಯಲ್ಲಿ (NPS) ಪರಿಗಣಿಸಲಾಗುವುದೆಂದು ಅಧಿಸೂಚಿಸಿರುವುದಿಲ್ಲವೆಂದು ತಿಳಿಸುತ್ತಾ ಪಿಂಚಣಿ ಮತ್ತು ಗ್ರ್ಯಾಚುಟಿಯನ್ನು ಅನ್ವಯಿಸುವ ಬಗ್ಗೆ ಹಾಗೂ ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮಗಳನ್ನು ಅಳವಡಿಸಿಕೊಳ್ಳುವ ಕುರಿತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 1976 ರ ಅಡಿಯಲ್ಲಿ ರಚಿಸಲ್ಪಟ್ಟ ಮೇ, 1985 ರ ಅನುಶಾಸನ ದಿನಾಂಕ.12.07.2007 ಹಾಗೂ 24.07.2015 ರ ಸರ್ಕಾರಿ ಆದೇಶ ಮತ್ತು ದಿನಾಂಕ.17.01.2020 ರ ಕರ್ನಾಟಕ ರಾಜ್ಯ ಪತ್ರದಲ್ಲಿನ ಅಂಶಗಳನ್ನು ವಿವರಿಸುವುದರ ಜೊತೆಗೆ ತಾವು ದಿನಾಂಕ.01.04.2006 ಕ್ಕಿಂತ ಪೂರ್ವದಲ್ಲಿ ಸರ್ಕಾರದ ಇತರೇ ಇಲಾಖೆ/ವಿಶ್ವವಿದ್ಯಾಲಯದ ಖಾಯಂ ಸೇವೆಯಲ್ಲಿದ್ದು ಸಮುಚಿತ ಮಾರ್ಗದಲ್ಲಿ ಅರ್ಜಿ ಸಲ್ಲಿಸಿ, ಕೆಸಿಎಸ್ ನಿಯಮ 252 (ಬಿ) ರಲ್ಲಿನ ವಿಧಿವಿಧಾನದಂತೆ ಕಾರ್ಯ ನಿರ್ವಹಿಸುತ್ತಿದ್ದ ಹುದ್ದೆಯಿಂದ ಬಿಡುಗಡೆಹೊಂದಿ ವಿಶ್ವವಿದ್ಯಾಲಯದಲ್ಲಿನ ವಿವಿಧ ಉನ್ನತ ಹುದ್ದೆಗಳಿಗೆ ನೇಮಕಗೊಂಡಿರುವುದರಿಂದ ಅವರುಗಳ ಸೇವೆಯನ್ನು ದಿನಾಂಕ.01.04.2006 ಕ್ಕಿಂತ ಮೊದಲು ಜಾರಿಯಲ್ಲಿದ್ದ ಹಳೆ (OPS) ಪಿಂಚಣಿ ಯೋಜನೆಯಲ್ಲಿ ಮುಂದುವರೆಸಲಾಗಿರುತ್ತದೆಂದು ಹೇಳಿ, ಪಿಂಚಣಿ ಮತ್ತು ಗ್ರ್ಯಾಚುಟಿಯನ್ನು ಅನ್ವಯಿಸುವ ಬಗ್ಗೆ ಹಾಗೂ ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮಗಳನ್ನು ಅಳವಡಿಸಿಕೊಳ್ಳುವ ಕುರಿತು ವಿಶ್ವವಿದ್ಯಾಲಯವು ಅನುಶಾಸನವನ್ನು ರಚಿಸಿಕೊಂಡಿರುವುದರಿಂದ ದಿನಾಂಕ 12.04.2023 ರ ಸರ್ಕಾರದ ಪತ್ರ ಸಂ. ಇಡಿ 44 ಯುಕೆವಿ 2020 ರಲ್ಲಿ ಮಾನ್ಯ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ನೀಡಿದ ನಿರ್ದೇಶನವನ್ನು ತಮಗೆ ಅನ್ವಯಿಸದೇ ಅವರ ಸೇವೆಯನ್ನು (NPS) ಹೊಸ ಅಂಶದಾಯಿ ಪಿಂಚಣಿ ಯೋಜನೆಯಡಿಯಲ್ಲಿ ಏಕೆ ಮುಂದುವರೆಸಬಾರದೆಂಬುದಕ್ಕೆ ಸೂಕ್ತ ದಾಖಲೆಗಳೊಂದಿಗೆ ಲಿಖಿತ ವಿವರಣೆಯನ್ನು ಸಲ್ಲಿಸುವಂತೆ ವಿಶ್ವವಿದ್ಯಾಲಯದ ಹೊರಡಿಸಿದ ದಿನಾಂಕ.22.02.2024 ರ ಪತ್ರವನ್ನು ಹಿಂಪಡೆದು ಹಳೆ (OPS) ಪಿಂಚಣಿ ಯೋಜನೆಯನ್ನು ಮುಂದುವರೆಸಬೇಕೆಂದು ವಿನಂತಿಸಿಕೊಂಡಿರುತ್ತಾರೆ. ಮುಂದುವರೆದು, ಇನ್ನೂ ಕೆಲವು ಬೋಧಕ ಸಿಬ್ಬಂದಿಯವರು ಲಿಖಿತ ವಿವರಣೆಯನ್ನು ಸಲ್ಲಿಸಲು ಹೆಚ್ಚಿನ ಕಾಲವಕಾಶವನ್ನು ನೀಡಬೇಕೆಂದು ಕೋರಿರುತ್ತಾರೆ.

ಹಾಗೆಯೇ, ಅಧ್ಯಕ್ಷರು, ಸ್ನಾತಕೋತ್ತರ ಶಿಕ್ಷಕ ಸಂಘಗಳು ಇವರು ವಿಶ್ವವಿದ್ಯಾಲಯದ ಹೊರಡಿಸಿದ ದಿನಾಂಕ.22.02.2024 ರ ಪತ್ರದಲ್ಲಿ ಕಾಣಿಸಿದಂತೆ ದಿನಾಂಕ 12.04.2023 ರ ಸರ್ಕಾರದ ಪತ್ರ ಸಂ. ಇಡಿ 44 ಯುಕೆವಿ 2020 ರಲ್ಲಿ ಮಾನ್ಯ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ನೀಡಿರುವುದು ಆದೇಶ/ನಿರ್ದೇಶನವಲ್ಲ ಬದಲಾಗಿ, ಇದು ವಿಶ್ವವಿದ್ಯಾಲಯ ವ್ಯವಹರಿಸಿದ ಅನಗತ್ಯ ಪತ್ರ ವ್ಯವಹಾರಕ್ಕೆ ನೀಡಿದ ಒಂದು ಸ್ಪಷ್ಟೀಕರಣವಾಗಿದ್ದು, ಈ ಸ್ಪಷ್ಟೀಕರಣದಲ್ಲಿ ಹಳೆ (OPS) ಪಿಂಚಣಿ ಯೋಜನೆಯನ್ನು ಸ್ಥಗಿತಗೊಳಿಸಿ ಹೊಸ ಪಿಂಚಣಿ



A. Channappa
ಕುಲಸಚಿವರು

ಕುಲಪತಿಗಳು

ಯೋಜನೆಯನ್ನು (NPS) ಮುಂದುವರೆಸಬೇಕೆಂಬ ಬಗ್ಗೆ ಆದೇಶ/ನಿರ್ದೇಶನ ಇರುವುದಿಲ್ಲವೆಂದು ಉಲ್ಲೇಖಿಸುತ್ತಾ ಪಿಂಚಣಿ ಮತ್ತು ಗ್ರ್ಯಾಚ್ಯುಟಿಯನ್ನು ಅನ್ವಯಿಸುವ ಬಗ್ಗೆ ಹಾಗೂ ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮಗಳನ್ನು ಅಳವಡಿಸಿಕೊಳ್ಳುವ ಕುರಿತು ವಿಶ್ವವಿದ್ಯಾಲಯವು ರಚಿಸಿಕೊಂಡ ಅಂದಿನ ಗೌರವಾನ್ವಿತ ರಾಜ್ಯಪಾಲರಿಂದ ಅನುಮೋದಿತಗೊಂಡ ಅನುಶಾಸನದ ಪ್ರಕಾರ, ಸರ್ಕಾರಿ ನೌಕರರಿಗೆ ಅನ್ವಯವಾಗತಕ್ಕ ಪಿಂಚಣಿ ಮತ್ತು ಗ್ರ್ಯಾಚ್ಯುಟಿಗೆ ಸಂಬಂಧಿಸಿದ ಕರ್ನಾಟಕ ನಾಗರಿಕ ಸೇವಾ ನಿಯಮಗಳಿಗೆ ಪೂರಕವಾಗಿ ಅಥವಾ ಹೆಚ್ಚುವರಿಯಾಗಿ ಸರ್ಕಾರ ಕಾಲ ಕಾಲಕ್ಕೆ ಹೊರಡಿಸುವ ಆದೇಶ, ಅಧಿಸೂಚನೆ, ಸರ್ಕಾರಿ ನಿಯಮ ಮತ್ತು ಅಧಿಕೃತ ಜ್ಞಾಪನಾ ಪತ್ರ ಇತ್ಯಾದಿಗಳನ್ನು ಸರ್ಕಾರದ ಅಡಿಯಲ್ಲಿ ಜಾರಿಗೆ ಬರುವ ದಿನಾಂಕದಂದೆ ವಿಶ್ವವಿದ್ಯಾಲಯವು ಜಾರಿಗೆ ತರುತ್ತದೆಂದಿರುವುದರಿಂದ ಈ ಅನುಶಾಸನದ ವಿರುದ್ಧ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಈ ರೀತಿಯ ಸ್ಪಷ್ಟೀಕರಣವನ್ನು ನೀಡಲು ಅಧಿಕಾರವನ್ನು ಹೊಂದಿರುವುದಿಲ್ಲವೆಂದು ಹೇಳಿ, ಅವರು ಯಾವುದೇ ಸ್ಪಷ್ಟೀಕರಣ ನೀಡಿದ್ದರೂ ಅದು ಶೂನ್ಯ ಮತ್ತು ಅನೂರ್ಜಿತವಾಗಿರುತ್ತದೆಂದು ತಿಳಿಸುತ್ತಾ ಎಲ್ಲ ಬೋಧಕ ಸಿಬ್ಬಂದಿಯವರು ದಿನಾಂಕ.01.04.2006 ಕ್ಕಿಂತ ಪೂರ್ವದಲ್ಲಿ ಸರ್ಕಾರದ ಇತರೇ ಇಲಾಖೆ/ವಿಶ್ವವಿದ್ಯಾಲಯದ ಖಾಯಂ ಸೇವೆಯಲ್ಲಿದ್ದು ಕೆಸಿಎಸ್ ನಿಯಮ 252 (ಬಿ) ರಲ್ಲಿನ ವಿಧಿವಿಧಾನದಂತೆ ಕಾರ್ಯ ನಿರ್ವಹಿಸುತ್ತಿದ್ದ ಹುದ್ದೆಯಿಂದ ಬಿಡುಗಡೆಹೊಂದಿ ವಿಶ್ವವಿದ್ಯಾಲಯದಲ್ಲಿನ ವಿವಿಧ ಉನ್ನತ ಹುದ್ದೆಗಳಿಗೆ ನೇಮಕಗೊಂಡಿರುವುದರಿಂದ ಅವರುಗಳ ಸೇವೆಯನ್ನು ದಿನಾಂಕ.01.04.2006 ಕ್ಕಿಂತ ಮೊದಲು ಜಾರಿಯಲ್ಲಿದ್ದ ಹಳೆ (OPS) ಪಿಂಚಣಿ ಯೋಜನೆಯಲ್ಲಿ ಮುಂದುವರೆಸಲಾಗಿದ್ದು, ಸುಮಾರು 20 ವರ್ಷಗಳ ನಂತರ ಈ ಹಂತದಲ್ಲಿ ಕಾನೂನಬಾಹಿರವಾಗಿ ಮತ್ತು ಬಲವಂತವಾಗಿ ಹೊಸ ಪಿಂಚಣಿ ಯೋಜನೆಯನ್ನು (NPS) ವಿಶ್ವವಿದ್ಯಾಲಯವು ಅನುಷ್ಠಾನಕ್ಕೆ ತಂದರೆ ಯಾವುದೇ ಆರ್ಥಿಕ ಪ್ರಯೋಜನಗಳು ಮತ್ತು ಭದ್ರತೆ ಇಲ್ಲದಂತಾಗಲಿರುವುದರಿಂದ (NPS) ಹೊಸ ಅಂಶದಾಯಿ ಪಿಂಚಣಿ ಯೋಜನೆಯಡಿಯಲ್ಲಿ ಏಕೆ ಮುಂದುವರೆಸಬಾರದೆಂಬುದಕ್ಕೆ ಸೂಕ್ತ ದಾಖಲೆಗಳೊಂದಿಗೆ ಲಿಖಿತ ವಿವರಣೆಯನ್ನು ಸಲ್ಲಿಸುವಂತೆ ಹೊರಡಿಸಿದ ದಿನಾಂಕ.22.02.2024 ರ ಪತ್ರವನ್ನು ಹಿಂಪಡೆದು ಹಳೆ (OPS) ಪಿಂಚಣಿ ಯೋಜನೆಯನ್ನು ಮುಂದುವರೆಸಬೇಕೆಂದು ಕೋರಿಕೊಂಡಿರುತ್ತಾರೆ.

ಅಲ್ಲದೇ, ಡಾ.ಪಿ.ಈರಯ್ಯ, ಪ್ರಾಧ್ಯಾಪಕರು, ಸ್ನಾತಕೋತ್ತರ ಭೌತಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ರವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ತಮ್ಮ ನೇಮಕಾತಿ ದಿನಾಂಕ.01.04.2006 ರ ನಂತರದಲ್ಲಿ ಆಗಿರುವುದಿಲ್ಲ. ಬದಲಾಗಿ, ಅಲ್ಲಿನ ಹುದ್ದೆಯ ನೇಮಕಾತಿ ದಿನಾಂಕ.02.01.2006 ರಂದೇ ನಡೆದಿರುತ್ತದೆಂದುಹೇಳಿ, ತಾವು ದಿನಾಂಕ 01.04.2006 ಕ್ಕಿಂತ ಪೂರ್ವದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಖಾಯಂ ಆಗಿ ನೇಮಕಗೊಂಡು ಕರ್ನಾಟಕ ವಿಶ್ವವಿದ್ಯಾಲಯದ ಸೇವೆಗೆ ರಾಜೀನಾಮೆ ಸಲ್ಲಿಸಿ ಸೇವೆಯಿಂದ ಬಿಡುಗಡೆಗೊಂಡು ದಿನಾಂಕ 04.04.2006 ನಂತರ ಬೆಂಗಳೂರು ವಿಶ್ವವಿದ್ಯಾಲಯದ ಬೋಧಕ ಹುದ್ದೆಗೆ ನೇಮಕಗೊಂಡಿದ್ದು, ಬೆಂಗಳೂರು ವಿಶ್ವವಿದ್ಯಾಲಯವು ಅವರ ಸೇವೆಯನ್ನು ಹಳೆ (OPS) ಪಿಂಚಣಿ ಯೋಜನೆಯನ್ನು ಮುಂದುವರೆಸಿರುವುದರಿಂದ ಕವಿವಿ ಯಲ್ಲಿನ ದಿನಾಂಕ 18.03.2003 ರಿಂದ 03.04.2006 ರವರೆಗೆ ಖಾಯಂ ಉಪನ್ಯಾಸಕರೆಂದು ಸಲ್ಲಿಸಿದ ಸೇವಾವಧಿಗೆ ಅನ್ವಯವಾಗತಕ್ಕ ಪಿಂಚಣಿ ಹಾಗೂ ರಜಾ ವೇತನ ವಂತಿಗೆ ಮೊತ್ತವನ್ನು ವರ್ಗಾಯಿಸುವಂತೆ ದಿನಾಂಕ.08.03.2024 ಪತ್ರದಲ್ಲಿ ವಿನಂತಿಸಿಕೊಂಡಿರುತ್ತಾರೆ.

ಸದರ ವಿಷಯದ ಕುರಿತು ಇಲ್ಲಿ ನಿವೇದಿಸುವುದೇನೆಂದರೆ, ದಿನಾಂಕ.01.04.2006 ಕ್ಕಿಂತ ಪೂರ್ವದಲ್ಲಿ ನಿಯಮಿತ ಸೇವೆಯಲ್ಲಿದ್ದು ಕೆ.ಸಿ.ಎಸ್. ನಿಯಮ 252 (ಬಿ) ರಲ್ಲಿನ ವಿಧಿವಿಧಾನದಂತೆ ಸದರಿ ಹುದ್ದೆಯಿಂದ ಬಿಡುಗಡೆಹೊಂದಿ ದಿನಾಂಕ.01.04.2006 ರಂದು ಮತ್ತು ನಂತರ ವಿಶ್ವವಿದ್ಯಾಲಯದಲ್ಲಿನ ಹುದ್ದೆಗೆ ನೇಮಕಗೊಂಡು ಸಲ್ಲಿಸುತ್ತಿರುವ ಬೋಧಕ ಸಿಬ್ಬಂದಿಯವರ ಸೇವೆಯನ್ನು ದಿನಾಂಕ 12.07.2007 ರ ಸರ್ಕಾರದ ಅಧಿಕೃತ ಜ್ಞಾಪನ ಪತ್ರ ಸಂ. FD (Spl) 01 PEN 2007 ರ ಆಧಾರದ ಮೇಲೆ (OPS) ಹಳೆ ಪಿಂಚಣಿ ಸೌಲಭ್ಯದಡಿಯಲ್ಲಿ ಪರಿಗಣಿಸಿ ಕಚೇರಿ ಆದೇಶವನ್ನು ಹೊರಡಿಸುವುದರ ಜೊತೆಗೆ ವಿಶ್ವವಿದ್ಯಾಲಯ ಅನುಸರಿಸಿದ ಕ್ರಮವನ್ನು ಸರ್ಕಾರದ ಗಮನಕ್ಕೆ ತರುತ್ತಾ, ಅವರ ಸೇವೆಯನ್ನು (OPS) ಹಳೆ ಪಿಂಚಣಿ ಸೌಲಭ್ಯದಡಿಯಲ್ಲಿ ಪರಿಗಣಿಸಿರುವುದಕ್ಕೆ ಅನುಮೋದನೆ ಮತ್ತು ದಿನಾಂಕ 01.04.2006 ಕ್ಕಿಂತ ಪೂರ್ವದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಖಾಯಂ ಆಗಿ ನೇಮಕಗೊಂಡ ಬೋಧಕ/ ಬೋಧಕೇತರ ಸಿಬ್ಬಂದಿಗಳು ಕೆ.ಸಿ.ಎಸ್. ನಿಯಮ 252 (ಬಿ) ರನ್ವಯ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಗೆ ರಾಜೀನಾಮೆ ಸಲ್ಲಿಸಿ ಸೇವೆಯಿಂದ ಬಿಡುಗಡೆಗೊಂಡು ದಿನಾಂಕ 01.04.2006 ನಂತರ ರಾಜ್ಯ ಸರ್ಕಾರದ ಇತರೇ ಇಲಾಖೆಗಳಲ್ಲಿ/ ವಿಶ್ವವಿದ್ಯಾಲಯಗಳಲ್ಲಿ ಹೊಸದಾಗಿ ನೇಮಕ ಹೊಂದಿದ ಅಂತಹ ನೌಕರರ ಪಿಂಚಣಿ ವಂತಿಕೆ/ರಜಾ ವೇತನ ವಂತಿಕೆ ಮೊತ್ತವನ್ನು ಸಂಬಂಧಪಟ್ಟ ವಿಶ್ವವಿದ್ಯಾಲಯಗಳಿಗೆ ಕಳುಹಿಸಿಕೊಡುವ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಬೆಂಗಳೂರು ಇವರಿಗೆ ಕೋರಿ ಸಲ್ಲಿಸಿದ ದಿನಾಂಕ.14.03.2018 ರ ಈ ಕಚೇರಿ ಪ್ರಸ್ತಾವನೆಗೆ ಪ್ರತಿಕ್ರಿಯಿಸುತ್ತಾ, ***ದಿನಾಂಕ 12.04.2023 ರ ಸರ್ಕಾರದ ಪತ್ರ ಸಂ. ಇಡಿ 44 ಯುಕೆವಿ 2020*** ರಲ್ಲಿ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಸ್ಪಷ್ಟೀಕರಿಸಿದ



ಕುಲಸಚಿವರು

ಕುಲಪತಿಗಳು

ಅಂಶಗಳ ಹಿನ್ನಲೆಯಲ್ಲಿ ದಿನಾಂಕ.16.02.2024 ರ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಹಳೆ ಪಿಂಚಣಿ ಯೋಜನೆ (OPS) ಅಡಿಯಲ್ಲಿ ಮುಂದುವರೆದ 49 ಜನ ಬೋಧಕ ಸಿಬ್ಬಂದಿಯವರಿಗೆ ಅವರ ಸೇವೆಯನ್ನು (NPS) ಹೊಸ ಅಂಶದಾಯಿ ಪಿಂಚಣಿ ಯೋಜನೆಯಡಿಯಲ್ಲಿ ಏಕೆ ಮುಂದುವರೆಸಬಾರದೆಂಬುದಕ್ಕೆ ಸೂಕ್ತ ದಾಖಲೆಗಳೊಂದಿಗೆ ಲಿಖಿತ ವಿವರಣೆಯನ್ನು ಸಲ್ಲಿಸುವಂತೆ ದಿನಾಂಕ.22.02.2024 ರ ವಿವಿಧ ಸಂಖ್ಯೆಗಳ ಈ ಕಚೇರಿ ಪತ್ರದ ಮೂಲಕ ತಿಳಿಸಲಾಗಿತ್ತು. ಅದೇ ರೀತಿ ದಿನಾಂಕ 01.04.2006 ಕ್ಕಿಂತ ಪೂರ್ವದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಖಾಯಂ ಆಗಿ ನೇಮಕಗೊಂಡ ಬೋಧಕ/ ಬೋಧಕೇತರ ಸಿಬ್ಬಂದಿಗಳು ಕೆ.ಸಿ.ಎಸ್. ನಿಯಮ 252 (ಬಿ) ರನ್ವಯ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಗೆ ರಾಜೀನಾಮೆ ಸಲ್ಲಿಸಿ ಸೇವೆಯಿಂದ ಬಿಡುಗಡೆಗೊಂಡು ದಿನಾಂಕ 01.04.2006 ನಂತರ ರಾಜ್ಯ ಸರ್ಕಾರದ ಇತರೇ ಇಲಾಖೆಗಳಲ್ಲಿ/ ವಿಶ್ವವಿದ್ಯಾಲಯಗಳಲ್ಲಿ ಹೊಸದಾಗಿ ನೇಮಕ ಹೊಂದಿದ ಅಂತಹ ನೌಕರರ ಪಿಂಚಣಿ ವಂತಿಕೆ/ರಜಾ ವೇತನ ವಂತಿಕೆ ಮೊತ್ತವನ್ನು ವರ್ಗಾಯಿಸಲು ಅವಕಾಶವಿರುವುದಿಲ್ಲವೆಂದು ಸಂಬಂಧಪಟ್ಟ ವಿಶ್ವವಿದ್ಯಾಲಯ/ಸಿಬ್ಬಂದಿಯವರಿಗೆ ದಿನಾಂಕ.22.02.2024 ರ ವಿವಿಧ ಸಂಖ್ಯೆಗಳ ಈ ಕಚೇರಿ ಪತ್ರದ ಮೂಲಕ ತಿಳಿಸಿದ್ದು ಇರುತ್ತದೆ.

ಮುಂದುವರೆದು ಇಲ್ಲಿ ನಿವೇದಿಸುವುದೇನೆಂದರೆ, ಕಂಡಿಕೆ ಸಂಖ್ಯೆ.457 ರಲ್ಲಿ ಕಾಣಿಸಿದ ಬೋಧಕ ಸಿಬ್ಬಂದಿಗಳ ಹಾಗೂ ಅಧ್ಯಕ್ಷರು, ಸ್ನಾತಕೋತ್ತರ ಶಿಕ್ಷಕ ಸಂಘಗಳು ಇವರ ಮನವಿ ಮೇರೆಗೆ ಕಚೇರಿ ದಾಖಲೆಗಳನ್ನು ಪರಿಶೀಲಿಸಲಾಗಿ, ಪಿಂಚಣಿ ಮತ್ತು ಗ್ರ್ಯಾಚುಟಿಯನ್ನು ಅನ್ವಯಿಸುವ ಬಗ್ಗೆ ಹಾಗೂ ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮಗಳನ್ನು ಅಳವಡಿಸಿಕೊಳ್ಳುವ ಕುರಿತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 1976 ರ ಅಡಿಯಲ್ಲಿ ರಚಿಸಲ್ಪಟ್ಟ ಮೇ, 1985 ರ ಅನುಶಾಸನದಲ್ಲಿ ಈ ಮುಂದಿನಂತೆ ಹೇಳಲಾಗಿರುತ್ತದೆ

> "**5.** Application of the provisions of Karnataka Civil Services Rules etc. **5.1** The provisions of Part-IV of Karnataka Civil Services Rules relating to various types of pensions rates of pension and gratuity, treatment of periods of leave for the purpose of qualifying service, interruption in service and other related matters including the commutation of pension as they existed as on the "appointed day" and also as amended from time to time by Government thereafter shall apply mutatis mutandis to the employees of the University in so far as they are relevant to the University service and set up except the provisions of Rules 234 A, 235, 241, 241-A, 242 and 243 of the Karnataka Civil Services Rules. **5.2 Family Pension** : The Karnataka Government Servants (Pension) rules, 1964 as they existed as on the "appointed day" and as amended from time to time by Government thereafter, shall apply mutatis mutandis to the employees of the University. **5.3.** All Government Orders, Notifications, Government Rules, Official Memoranda etc. with regard to pension and gratuity matters applicable to the State Government servants issued from time to time by the Government of Karnataka Complementary to or in addition to Karnataka Civil Services Rules shall be adopted and given effect to by the University from the same date as they come into force under Government."

ಮೇಲ್ಕಾಣಿಸಿದ ವಿವರಣೆಗಳನ್ವಯ ಪಿಂಚಣಿ ಮತ್ತು ಗ್ರ್ಯಾಚುಟಿಯನ್ನು ಅನ್ವಯಿಸುವ ಬಗ್ಗೆ ಹಾಗೂ ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮಗಳನ್ನು ಅಳವಡಿಸಿಕೊಳ್ಳುವ ಕುರಿತು ವಿಶ್ವವಿದ್ಯಾಲಯವು ರಚಿಸಿಕೊಂಡ ಅಂದಿನ ಗೌರವಾನ್ವಿತ ರಾಜ್ಯಪಾಲರಿಂದ ಅನುಮೋದಿತಗೊಂಡ ಮೇ, 1985 ರ ಅನುಶಾಸನದ ಪ್ರಕಾರ, ಸರ್ಕಾರಿ ನೌಕರರಿಗೆ ಅನ್ವಯವಾಗತಕ್ಕ ಪಿಂಚಣಿ ಮತ್ತು ಗ್ರ್ಯಾಚುಟಿಗೆ ಸಂಬಂಧಿಸಿದ ಕರ್ನಾಟಕ ನಾಗರಿಕ ಸೇವಾ ನಿಯಮಗಳಿಗೆ ಪೂರಕವಾಗಿ ಅಥವಾ ಹೆಚ್ಚುವರಿಯಾಗಿ ಸರ್ಕಾರ ಕಾಲ ಕಾಲಕ್ಕೆ ಹೊರಡಿಸುವ ಆದೇಶ, ಅಧಿಸೂಚನೆ, ಸರ್ಕಾರಿ ನಿಯಮ ಮತ್ತು ಅಧಿಕೃತ ಜ್ಞಾಪನಾ ಪತ್ರ ಇತ್ಯಾದಿಗಳನ್ನು ಸರ್ಕಾರದ ಅಡಿಯಲ್ಲಿ ಜಾರಿಗೆ ಬರುವ ದಿನಾಂಕದಂದೆ ವಿಶ್ವವಿದ್ಯಾಲಯವು ಜಾರಿಗೆ ತರುತ್ತದೆಂಬುದು ಸ್ಪಷ್ಟವಾಗಿದ್ದು, ಆಯಾ ಯೋಜನೆಯಲ್ಲಿರುವ ನೌಕರರುಗಳಿಗೆ ಸದರ ಸೌಲಭ್ಯವನ್ನು ಅನ್ವಯಿಸಬಹುದಾಗಿರುತ್ತದೆ.

ಸಾಂದರ್ಭಿಕವಾಗಿ ಇಲ್ಲಿ ಹೇಳುವುದಾದರೆ, ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ವಿಭಾಗಗಳ/ಘಟಕ ಮಹಾವಿದ್ಯಾಲಯಗಳ ಸೇವಾ ನಿರತ/ನಿವೃತ್ತಿ ಹೊಂದಿದ ಹಾಗೂ ಅಧ್ಯಕ್ಷರು, ಸ್ನಾತಕೋತ್ತರ ಶಿಕ್ಷಕ ಸಂಘಗಳು ಇವರು ಪಿಂಚಣಿ ಮತ್ತು ಗ್ರ್ಯಾಚುಟಿಯನ್ನು ಅನ್ವಯಿಸುವ ಬಗ್ಗೆ ಹಾಗೂ ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮಗಳನ್ನು ಅಳವಡಿಸಿಕೊಳ್ಳುವ ಕುರಿತು ವಿಶ್ವವಿದ್ಯಾಲಯವು ಅನುಶಾಸನವನ್ನು ರಚಿಸಿಕೊಂಡಿರುವುದರಿಂದ ತಾವು ಹಳೆ (OPS) ಪಿಂಚಣಿ ಯೋಜನೆಯಲ್ಲಿಯೇ ಮುಂದುವರೆಯಲು ಅರ್ಹರಿರುತ್ತಾರೆಂದು ಹೇಳಿ, (NPS) ಹೊಸ ಅಂಶದಾಯಿ ಪಿಂಚಣಿ ಯೋಜನೆಯಡಿಯಲ್ಲಿ ಏಕೆ ಮುಂದುವರೆಸಬಾರದೆಂಬುದಕ್ಕೆ ಸೂಕ್ತ ದಾಖಲೆಗಳೊಂದಿಗೆ ಲಿಖಿತ ವಿವರಣೆಯನ್ನು ಸಲ್ಲಿಸುವಂತೆ ಹೊರಡಿಸಿದ ದಿನಾಂಕ.22.02.2024 ರ ಪತ್ರವನ್ನು ಹಿಂಪಡೆಯುವಂತೆ ವಿನಂತಿಸಿರುತ್ತಾರೆ. ಆದರೆ, ***ದಿನಾಂಕ 12.04.2023 ರ ಸರ್ಕಾರದ ಪತ್ರ ಸಂ. ಇಡಿ 44 ಯುಕೆವಿ 2020*** ರಲ್ಲಿ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಉನ್ನತ



ಕುಲಸಚಿವರು ಕುಲಪತಿಗಳು

ಶಿಕ್ಷಣ ಇಲಾಖೆ, ಬೆಂಗಳೂರು ಇವರು ಕೆ.ಸಿ.ಎಸ್. ನಿಯಮ 222 ರಲ್ಲಿನ ಮೊದಲನೇ ಷರತ್ತಿನ ಪ್ರಕಾರ ವಿಶ್ವವಿದ್ಯಾಲಯದಲ್ಲಿ ಸಲ್ಲಿಸಿದ ಸೇವೆಯು ಸರ್ಕಾರಿ ಸೇವೆಯಾಗಿರುವುದಿಲ್ಲವಾದ್ದರಿಂದ, ಅಂತಹ ಸೇವೆಯನ್ನು ಸರ್ಕಾರದಡಿ ಸಲ್ಲಿಸಿದ ಸೇವೆಯೊಂದಿಗೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ಅವಕಾಶವಿಲ್ಲ. ದಿನಾಂಕ 01.04.2006 ರ ನಂತರದ ನೇಮಕಾತಿಗಳಿಗೆ ಎಲ್ಲಾ ಸ್ವಾಯತ್ತ ಸಂಸ್ಥೆಗಳು ಹೊಸ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಅನ್ವಯಿಸಬೇಕಾಗಿರುತ್ತದೆಂದು ಹೇಳಿ, ದಿನಾಂಕ 12.07.2007 ರ ಅಧಿಕೃತ ಜ್ಞಾಪನದಲ್ಲಿನ ಅವಕಾಶವು ಸರ್ಕಾರದ ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ಹೊಸದಾಗಿ ನೇಮಕಾತಿ ಹೊಂದಿರುವ ಸರ್ಕಾರಿ ನೌಕರರಿಗೆ ಮಾತ್ರ ಅನ್ವಯವಾಗಿರುತ್ತದೆ. ಇದನ್ನು ಸ್ವಾಯತ್ತ ಸಂಸ್ಥೆಗಳಿಗೆ ವಿಸ್ತರಿಸಿರುವುದಿಲ್ಲವೆಂದು ತಿಳಿಸಿ ದಿನಾಂಕ 01.04.2006 ರ ನಂತರ ನೇಮಕಾತಿ ಹೊಂದಿದ ಸಿಬ್ಬಂದಿಗಳ ಸೇವೆಯನ್ನು (OPS) ಹಳೆ ಪಿಂಚಣಿ ಸೌಲಭ್ಯದಡಿಯಲ್ಲಿ ಪರಿಗಣಿಸಲು ಅವಕಾಶವಿಲ್ಲವೆಂದು ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ದಿನಾಂಕ 12.04.2023 ರ ಸರ್ಕಾರದ ಪತ್ರ ಸಂಖ್ಯೆ ಇಡಿ 44 ಯುಕೆವಿ 2020 ರಲ್ಲಿ ಮಾನ್ಯ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ನೀಡಿದ ನಿರ್ದೇಶನದ ಆಧಾರದ ಮೇಲೆ ಸೇವೆಯನ್ನು (NPS) ಹೊಸ ಅಂಶದಾಯಿ ಪಿಂಚಣಿ ಯೋಜನೆಯಡಿಯಲ್ಲಿ ಏಕೆ ಮುಂದುವರೆಸಬಾರದೆಂಬುದಕ್ಕೆ ದಿನಾಂಕ 12.07.2007 ರ ಸರ್ಕಾರದ ಅಧಿಕೃತ ಜ್ಞಾಪನ ಪತ್ರ ಸಂ. FD (Spl) 01 PEN 2007 ರ ಆಧಾರದ ಮೇಲೆ (OPS) ಹಳೆ ಪಿಂಚಣಿ ಸೌಲಭ್ಯದಡಿಯಲ್ಲಿ ಮುಂದುವರೆದ ಬೋಧಕ ಸಿಬ್ಬಂದಿಯವರು ಮತ್ತು ಅಧ್ಯಕ್ಷರು, ಸ್ನಾತಕೋತ್ತರ ಶಿಕ್ಷಕ ಸಂಘಗಳು ಇವರು ಸಲ್ಲಿಸಿದ ಲಿಖಿತ ವಿವರಣೆಗಳಲ್ಲಿನ ಅಂಶಗಳನ್ನು ಆಡಳಿತ ಮಂಡಳಿಯ ಪರಿಶೀಲನೆಗಾಗಿ ಮಂಡಿಸಲಾಯಿತು.

ನಿರ್ಣಯ

**ಕರ್ನಾಟಕ ವಿಶ್ವವಿದ್ಯಾಲಯದಲ್ಲಿ/ಬೇರೆ ವಿಶ್ವವಿದ್ಯಾಲಯಗಳಲ್ಲಿ/ ಇತರೆ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ, ಸಮುಚಿತ ಮಾರ್ಗದಲ್ಲಿ ದಿನಾಂಕ 01.04.2006 ರಂದು ಹಾಗೂ ನಂತರ ಕರ್ನಾಟಕ ವಿಶ್ವವಿದ್ಯಾಲಯದ ವಿವಿಧ ಹುದ್ದೆಗಳಿಗೆ ನೇಮಕಗೊಂಡ ಬೋಧಕ ಸಿಬ್ಬಂದಿಗಳಿಗೆ ದಿನಾಂಕ: 12–04–2023ರ ಸರ್ಕಾರದ ಪತ್ರದನ್ವಯ ಸೇವಾ ನಿವೃತ್ತಿ ಪಿಂಚಣಿ ಯೋಜನೆಯಡಿ ಪರಿಗಣಿಸಲು ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ವಿಭಾಗಗಳ/ಘಟಕ ಮಹಾವಿದ್ಯಾಲಯಗಳ ಸೇವಾನಿರತ/ನಿವೃತ್ತಿ ಹೊಂದಿದ ಹಾಗೂ ಅಧ್ಯಕ್ಷರು, ಸ್ನಾತಕೋತ್ತರ ಶಿಕ್ಷಕ ಸಂಘಗಳು ಇವರು ಸಲ್ಲಿಸಿದ ಮನವಿಗಳನ್ನು ಪರಿಶೀಲಿಸಿದ ಸಿಂಡಿಕೇಟ ಸಭೆಯು, ಈಗಾಗಲೇ ಅಂತಹ ಶಿಕ್ಷಕ ಸಿಬ್ಬಂದಿಗಳ ವಿಷಯವಾಗಿ ವಿಶ್ವವಿದ್ಯಾಲಯವು ಕೈಗೊಂಡ ಕ್ರಮದ ಬಗ್ಗೆ ಸಂಬಂಧಪಟ್ಟ ಸರಕಾರಿ ಆದೇಶ/ಅನುಶಾಸನದೊಂದಿಗೆ ಸರ್ಕಾರಕ್ಕೆ ಮಾಹಿತಿಯನ್ನು ನೀಡುವಂತೆ ನಿರ್ಣಯಿಸಿತು.**



ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–14: ವಿಷಯ–:** ನವಂಬರ್/ಡಿಸೆಂಬರ್ 2022 ರಲ್ಲಿ ಜರುಗಿದ 3 ವರ್ಷದ ಕಾನೂನು ಪದವಿಯ 2ನೇ ಸೆಮಿಸ್ಟರ್‌ನ ಫಲಿತಾಂಶವು UUCMS ತಂತ್ರಾಂಶದ ಮೂಲಕ ಪ್ರಕಟಗೊಂಡಿರುತ್ತದೆ. ಆದರೆ Administrative Law ಹಾಗೂ Property Law ಈ ಎರಡು ವಿಷಯಗಳ ಅಂಕಗಳಲ್ಲಿ ವ್ಯತ್ಯಾಸ ಕಂಡು ಬಂದಿರುವ ಬಗ್ಗೆ ರಚಿಸಲಾದ ಸತ್ಯಶೋಧನಾ ಸಮಿತಿಯ ನೀಡಿದ ವರದಿ ಪರಿಶೀಲಿಸುವ ಕುರಿತು

**ಟಿಪ್ಪಣಿ:**

1. ನವ್ಹಂಬರ್/ಡಿಸೆಂಬರ್ 2022 ರಲ್ಲಿ ಜರುಗಿದ 3 ವರ್ಷದ ಕಾನೂನು ಪದವಿಯ 2ನೇ ಸೆಮಿಸ್ಟರಿನ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿ ಅವರ ಫಲಿತಾಂಶವನ್ನು ಯುಯುಸಿಎಮ್‌ಎಸ್ ತಂತ್ರಾಂಶದ ಮೂಲಕ ಪ್ರಕಟಗೊಂಡಿರುತ್ತದೆ. ನಂತರ ಕೆಲವೊಂದು ವಿದ್ಯಾರ್ಥಿಗಳು ಛಾಯಾಪ್ರತಿಗಾಗಿ ಅರ್ಜಿ ಸಲ್ಲಿಸಿದ್ದರು. ಸದರ ಪರೀಕ್ಷೆಯ ಮೌಲ್ಯಮಾಪನದ ಮುಖ್ಯ ಸಂಯೋಜಕರು ಮುಖಾಂತರ ಛಾಯಾಪ್ರತಿಗಳನ್ನು ವಿದ್ಯಾರ್ಥಿಗಳ ಯುಯುಸಿಎಮ್‌ಎಸ್‌ನ ಐಡಿ ಖಾತೆಯ ಮೂಲಕ ನೀಡಲಾಗಿರುತ್ತದೆ.
2. ಛಾಯಾಪ್ರತಿಗಳನ್ನು ವೀಕ್ಷಿಸಿದ ವಿದ್ಯಾರ್ಥಿಗಳು ಪರೀಕ್ಷಾ ವಿಭಾಗಕ್ಕೆ ಛಾಯಾ ಪ್ರತಿಗಳಲ್ಲಿರುವ ಕೈಬರಹ ನಮ್ಮವುಗಳಲ್ಲ. ಅವುಗಳನ್ನು ಸರಿಪಡಿಸಿ ನೀಡಲು ವಿನಂತಿಸಿಕೊಂಡಿರುತ್ತಾರೆ. ಮುಖ್ಯ ಸಂಯೋಜಕರಿಗೆ ಈ ವಿಷಯವನ್ನು ತಿಳಿಸಲಾಗಿ ಸಂಬಂಧಿಸಿದ ಮುಖ್ಯ ಸಂಯೋಜಕರು ಅವುಗಳನ್ನು ಪರಿಶೀಲಿಸಿ Administrative Law ಹಾಗೂ Property Law ವಿಷಯದಲ್ಲಿ ಕೋಡಿಂಗ್ ನಂಬರ ಪ್ರಕಾರ ಅಂಕಗಳನ್ನು ಕ್ರಮವಾಗಿ ನಮೂದಿಸದೇ ಅದಲು-ಬದಲು ಮಾಡಿದ್ದರಿಂದ ಅಲ್ಲಿ ವ್ಯತ್ಯಾಸ ಕಂಡು ಬಂದಿರುತ್ತದೆ.
3. ಆದ್ದರಿಂದ ಸದರ ವಿಷಯ ಕುರಿತು ದಿನಾಂಕ: 07.03.2024 ರಂದು ಜರುಗಿದ ಆಡಳಿತ ಮಂಡಳಿಯು ಅ.ನಂ. [07] ರಲ್ಲಿ ಈ ಕೆಳಗಿನಂತೆ ತಮ್ಮ ನಿರ್ಣಯವನ್ನು ಠರಾಯಿಸಿತು.

   **"ನವೆಂಬರ್/ಡಿಸೆಂಬರ್ 2022 ರಲ್ಲಿ ಜರುಗಿದ 3 ವರ್ಷದ ಕಾನೂನು ಪದವಿಯ 2ನೇ ಸೆಮಿಸ್ಟರ್‌ನ ಫಲಿತಾಂಶವು UUCMS ತಂತ್ರಾಂಶದ ಮೂಲಕ ಪ್ರಕಟಗೊಂಡಿರುತ್ತದೆ. ಆದರೆ Administrative Law ಹಾಗೂ Property Law ಈ ಎರಡು ವಿಷಯಗಳ ಅಂಕಗಳಲ್ಲಿ ವ್ಯತ್ಯಾಸ ಕಂಡು ಬಂದಿರುವ ಬಗ್ಗೆ ಈ ಹಿಂದೆ ರಚಿಸಲಾದ ಸತ್ಯಶೋಧನಾ ಸಮಿತಿಯು ನೀಡಿದ ಮುಚ್ಚಿದ ಲಕೋಟೆಯನ್ನು ತೆರೆದು ವರದಿಯನ್ನು ಸಭೆಯಲ್ಲಿ ಓದಲಾಗಿ ಕೆಲವು ಸ್ಪಷ್ಟತೆಗಳಿಗಾಗಿ ಸಮಿತಿಯ ಗಮನಕ್ಕೆ ಪುನ: ತಂದು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ನಿರ್ಣಯಿಸಿತು."**

4 ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಡಾ॥ ರಾಜೇಂದ್ರ ನಾಯಕ, ಡೀನರು, ಡಾ.ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ವಿಭಾಗ ಇವರ ಅಧ್ಯಕ್ಷತೆಯಲ್ಲಿ ಮತ್ತೊಮ್ಮೆ ಸತ್ಯಶೋಧನಾ ಸಮಿತಿಯ ದಿನಾಂಕ: 17.04.2024 ರಂದು ಮರು ಪರಿಶೀಲಿಸಿ ತಮ್ಮ ಅಂತಿಮ ವರದಿಯನ್ನು ಕುಲಸಚಿವರು(ಮೌಲ್ಯಮಾಪನ) ಇವರಿಗೆ ವಿಳಾಸ ಮಾಡಿದ ಮುಚ್ಚಿದ ಲಕೋಟೆಯನ್ನು ನೀಡಿದ್ದು ಆಡಳಿತ ಮಂಡಳಿಯ ಪರಿಶೀಲನೆಗಾಗಿ ಕಲಂ ತಯಾರಿಸಿ ಮಂಡಿಸಲಾಯಿತು.

ನಿರ್ಣಯ

**ನವಂಬರ್/ಡಿಸೆಂಬರ್ 2022 ರಲ್ಲಿ ಜರುಗಿದ 3 ವರ್ಷದ ಕಾನೂನು ಪದವಿಯ 2ನೇ ಸೆಮಿಸ್ಟರ್‌ನ ಫಲಿತಾಂಶವು UUCMS ತಂತ್ರಾಂಶದ ಮೂಲಕ ಪ್ರಕಟಗೊಂಡಿರುತ್ತದೆ. ಆದರೆ Administrative Law ಹಾಗೂ Property Law ಈ ಎರಡು ವಿಷಯಗಳ ಅಂಕಗಳಲ್ಲಿ ವ್ಯತ್ಯಾಸ ಕಂಡು ಬಂದಿರುವ ಬಗ್ಗೆ ರಚಿಸಲಾದ ಸತ್ಯಶೋಧನಾ ಸಮಿತಿಯು ನೀಡಿದ ಮುಚ್ಚಿದ ಲಕೋಟೆಯನ್ನು ಸಿಂಡಿಕೇಟ ಸಭೆಯಲ್ಲಿ ತೆರೆದು ವರದಿಯನ್ನು ಎಲ್ಲ ಸದಸ್ಯರ ಮುಂದೆ ಓದಲಾಗಿ ಸದರಿ ಸಮಿತಿಯ ವರದಿಯನ್ವಯ ಕ್ರಮ ಜರುಗಿಸಲು ಆಡಳಿತ ಮಂಡಳಿ ಸಭೆಯು ನಿರ್ಣಯಿಸಿತು.**



ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ-15: ವಿಷಯ-:** ಕ.ವಿ.ವಿ ಪರೀಕ್ಷಾ ವಿಭಾಗದ ಗಣಕಯಂತ್ರ ವಿಭಾಗಕ್ಕೆ ಒಂದು ಓ.ಎಂ.ಆರ್ ಸ್ಕ್ಯಾನರ್ ಖರೀದಿಸಲು ದೊಡ್ಡ ಖರೀದಿ ಸಮಿತಿ ಸಭೆಯಲ್ಲಿ ತೆಗೆದುಕೊಂಡ ಕ್ರಮವನ್ನು ಆಡಳಿತ ಮಂಡಳಿಯ ಸಮಿತಿಯ ಅನುಮೋದನೆಗಾಗಿ ಮಂಡಿಸುವ ಕುರಿತು

**ಟಿಪ್ಪಣಿ:**

ಕ.ವಿ.ವಿ ಪರೀಕ್ಷಾ ವಿಭಾಗದ ಗಣಕಯಂತ್ರ ವಿಭಾಗಕ್ಕೆ UUCMS ತಂತ್ರಾಂಶದಲ್ಲಿ ಎಲ್ಲಾ ಕೋರ್ಸುಗಳ OMR ಮಾದರಿ ಉತ್ತರ ಪತ್ರಿಕೆಗಳಿರುವುದರಿಂದ, ಈಗಾಗಲೇ ಕಳೆದ ವರ್ಷ ಪೂರೈಸಿದ ಒಂದು OMR ಸ್ಕ್ಯಾನರ್‌ನಿಂದ ಎಲ್ಲಾ OMR ಉತ್ತರ ಪತ್ರಿಕೆಗಳನ್ನು ಸ್ಕ್ಯಾನ್‌ಮಾಡಿ ನಿಗಧಿತ ಅವಧಿಯಲ್ಲಿ ಫಲಿತಾಂಶ ಸಂಸ್ಕರಿಸುವುದು ಸಾಧ್ಯವಾಗುತ್ತಿಲ್ಲ ಅಲ್ಲದೇ ಕಾಲಾವಕಾಶ ಬಹಳ ಬೇಕಾಗಿರುವುದರಿಂದ ಇನ್ನೋಂದು OMR ಸ್ಕ್ಯಾನರ್ ಖರೀದಿಸಲು ದಿನಾಂಕ:04.03.2024 ರಂದು ನಡೆದ ದೊಡ್ಡ ಖರೀದಿ ಸಮಿತಿಯ ಒಪ್ಪಿಗೆ ಪಡೆಯಲಾಗಿದೆ. ದೊಡ್ಡ ಖರೀದಿ ಸಮಿತಿಯ ಸಭೆಯು **ಕಲಂ ನಂ-07** ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿರುತ್ತದೆ.

**ಪರೀಕ್ಷಾ ವಿಭಾಗದ ಗಣಕಯಂತ್ರ ಶಾಖೆಗೆ ಈ ಕೆಳಗೆ ನಮೂದಿಸಿರುವ ವಿವರಗಳುಳ್ಳ ಒಂದು ಓ.ಎಂ.ಆರ್ ಸ್ಕ್ಯಾನರ್ ಕೆ.ಟಿ.ಪಿ.ಪಿ. ನಿಯಮಗಳನ್ನು ಪಾಲಿಸಿ ಕೋಟೇಶನ್ ಮೂಲಕ ಅಂದಾಜು ವೆಚ್ಚ ರೂ.1,00,000 + ಜಿ.ಎಸ್.ಟಿ ಯೊಂದಿಗೆ ಪರೀಕ್ಷಾ ವಿಭಾಗದ 2023-24 ನೇ ಸಾಲಿನ ಆಯವ್ಯಯ ಸಂಖ್ಯೆ 20056 ರಿಂದ ಖರೀದಿಸಲು ಕ್ರಮ ಜರುಗಿಸಲು ದೊಡ್ಡ ಖರೀದಿ ಸಮಿತಿಯು ಅನುಮೋದಿಸಿತು**

01. **Scanner Type: ADF (Automatic Document Feeder) Manual Feed, Diplex**
02. **Scanning Speed*1(A4 Lanscape)**
03. **(Color*2/Gratscale*2/Monochrome*2**
04. **Scanning Speed*1(A4 Portrait)**
05. **(Color*2/Gratscale*2/Monochrome*2**
06. **Simplex100ppm(200/300dpl)**
07. **Duplex 200ppm (200/300dpl)**
08. **Simplex 80ppm (200/300dpl)**
09. **Duplex 160ipm (200/300dpl)**
10. **Typical Daily Duty Cycle *9 30,000 Sheets**
11. **Weight 11kg(24ib)**

ಮುಂದುವರೆದು ಪರೀಕ್ಷಾ ವಿಭಾಗದ 2023-24 ನೇ ಸಾಲಿನ ಆಯವ್ಯಯ ಸಂಖ್ಯೆ 20056 ರಿಂದ ಖರೀದಿಸಲು ದೊಡ್ಡ ಖರೀದಿ ಸಮಿತಿಯು ಅನುಮೋದಿಸಿದ್ದು, 2024 ರ ಲೋಕಸಭಾ ಚುನಾವಣೆ ನೀತಿ ಸಂಹಿತಿ ಜಾರಿಯಾದ ಪ್ರಯುಕ್ತ ಖರೀದಿ ಪ್ರಕ್ರೀಯೆ ವಿಳಂಬವಾದ ಕಾರಣ ಸದರ ಸ್ಕ್ಯಾನರ್ ಖರೀದಿ ವೆಚ್ಚವನ್ನು 2023-24ನೇ ಸಾಲಿನ ಬದಲಾಗಿ 2024.25 ನೇ ಸಾಲಿನ ಆಯವ್ಯಯ ಶಿರ್ಷಿಕೆ ಸಂಖ್ಯೆ 20056 ರಿಂದ ಭರಿಸಲು ಆಡಳಿತ ಮಂಡಳಿ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

ನಿರ್ಣಯ

**ಕ.ವಿ.ವಿ ಪರೀಕ್ಷಾ ವಿಭಾಗದ ಗಣಕಯಂತ್ರ ವಿಭಾಗಕ್ಕೆ ಒಂದು ಓ.ಎಂ.ಆರ್ ಸ್ಕ್ಯಾನರ್ ಕೆ.ಟಿ.ಪಿ.ಪಿ. ನಿಯಮಗಳನ್ನು ಪಾಲಿಸಿ ಕೋಟೇಶನ್ ಮೂಲಕ ಅಂದಾಜು ವೆಚ್ಚ ರೂ.1,00,000 + ಜಿ.ಎಸ್.ಟಿ ಯೊಂದಿಗೆ ಪರೀಕ್ಷಾ ವಿಭಾಗದ ಆಯವ್ಯಯ ಸಂಖ್ಯೆ 20056 ರಿಂದ ಖರೀದಿಸಲು ದೊಡ್ಡ ಖರೀದಿ ಸಮಿತಿಯು ಕೈಗೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.**

**ಮುಂದುವರೆದು, 2024 ರ ಲೋಕಸಭಾ ಚುನಾವಣೆ ನೀತಿ ಸಂಹಿತಿ ಜಾರಿಯಾದ ಪ್ರಯುಕ್ತ ಖರೀದಿ ಪ್ರಕ್ರಿಯೆ ವಿಳಂಬವಾದ ಕಾರಣ ಸದರ ಸ್ಕ್ಯಾನರ್ ಖರೀದಿ ವೆಚ್ಚವನ್ನು 2023-24ನೇ ಸಾಲಿನ ಬದಲಾಗಿ 2024-25 ನೇ ಸಾಲಿನ ಆಯವ್ಯಯ ಶಿರ್ಷಿಕೆ ಸಂಖ್ಯೆ 20056 ರಿಂದ ಭರಿಸುವಂತೆ ಆಡಳಿತ ಮಂಡಳಿಯು ಅನುಮೋದಿಸಿತು.**



ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ–16: ವಿಷಯ–: ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ ಬಿ.ಎ (**Aggregate**) ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **'Karnatak University Retired Non-teaching Employees Association'** ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಕುರಿತು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಪರಿಶೀಲನೆಗಾಗಿ ಮಂಡಿಸುವ ಕುರಿತು

ಟಿಪ್ಪಣಿ :–

01. ಅಧ್ಯಕ್ಷರು, ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಶಿಕ್ಷಕೇತರ ನೌಕರರ ಸಂಘ (ರಿ) ಪಾವಟೆನಗರ ಧಾರವಾಡ. ಅವರು ದಿನಾಂಕ: 08–12–2023 ರ ಪತ್ರದಲ್ಲಿ ತಮ್ಮ ಸಂಘದ ವತಿಯಿಂದ ವಿಶ್ವವಿದ್ಯಾಲಯದಲ್ಲಿ ಸ್ನಾತಕ ಬಿ.ಎ (**Aggregate**) ಪದವಿಯಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **"Karnatak University Retired Non-teaching Employees Association"** ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವಂತೆ ವಿಶ್ವವಿದ್ಯಾಲಯದಲ್ಲಿ ಸುವರ್ಣ ಪದಕ ಸ್ಥಾಪಿಸಲು ಇಚ್ಛಿಸಿರುವರು.

02. ಸದರಿ ವಿಷಯದ ಕುರಿತು ದಿನಾಂಕ:02–11–2011 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ಸುವರ್ಣ ಪದಕ ಸ್ಥಾಪಿಸಲು ರೂಪಾಯಿ. 1,00,000/–(ರೂಪಾಯಿ ಒಂದು ಲಕ್ಷ ಮಾತ್ರ) ಪಾವತಿಸಲು ನಿರ್ಣಯಿಸಲಾಗಿದೆ. ಅದರಂತೆ ದಾನಿಗಳು ಹಣಕಾಸು ಅಧಿಕಾರಿಗಳು ಕ.ವಿ.ವಿ. ಧಾರವಾಡ ಇವರ ಹೆಸರಿನಲ್ಲಿ ಚೆಕ್ (ಚೆಕ್–ನಂ. 720344 ದಿನಾಂಕ: 08–12–2023) ಮೂಲಕ ರೂ. 1,00,000/–(ರೂಪಾಯಿ ಒಂದು ಲಕ್ಷ ಮಾತ್ರ) ಗಳನ್ನು ಘಟಿಕೋತ್ಸವ ಕಾರ್ಯಕ್ರಮದಲ್ಲಿ ಸುವರ್ಣ ಪದಕ ಪ್ರದಾನ ಮಾಡುವಂತೆ ಇಚ್ಛಿಸಿ ಪಾವತಿಸಿದ್ದಾರೆ. ಪ್ರಚಲಿತ ಅನುಶಾಸನದ ಪ್ರಕಾರ ದತ್ತಿ ನಿಧಿಯ ಠೇವಣಿಯಿಂದ ಬರುವ ಬಡ್ಡಿ ಮೊತ್ತದಿಂದ ಸುವರ್ಣ ಪದಕ ತಯಾರಿಸಲಾಗುವುದು.

03. ಈ ಪ್ರಸ್ತಾವನೆಯು ವಿಶ್ವವಿದ್ಯಾಲಯದ ಪ್ರಚಲಿತ ಅನುಶಾಸನದ ಪ್ರಕಾರ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಪೂರೈಸುತ್ತಿದ್ದು, ದಿನಾಂಕ:12–12–2015 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯ ನಿರ್ಣಯ ಸಂಖ್ಯೆ–13 ರಲ್ಲಿನ ನಿರ್ದೇಶನದಂತೆ ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಶಿಕ್ಷಕೇತರ ನೌಕರರ ಸಂಘದ ಸ್ವವಿವರದ ಮಾಹಿತಿಯನ್ನು ಪೂರೈಸಿದ್ದಾರೆ.

04. ದಿನಾಂಕ 07–03–2024 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ ಕಲಂ ನಂ–07 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ.

*"ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ ಬಿ.ಎ (**Aggregate**) ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **'Karnatak University Retired Non-teaching Employees Association'** ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಒಪ್ಪಿ ಅನುಮೋದಿಸಿತು."*

05. ಕಾರಣ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

ನಿರ್ಣಯ

ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ ಬಿ.ಎ (**Aggregate**) ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **'Karnatak University Retired Non-teaching Employees Association'** ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಪ್ರಸ್ತಾವನೆಗೆ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.



ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–17: ವಿಷಯ–:** ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ ಬಿ.ಕಾಂ (**Aggregate**) ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **'Karnatak University Retired Non-teaching Employees Association'** ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಕುರಿತು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಪರಿಶೀಲನೆಗಾಗಿ ಮಂಡಿಸುವ ಕುರಿತು

ಟಿಪ್ಪಣಿ :–

01. ಅಧ್ಯಕ್ಷರು, ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಶಿಕ್ಷಕೇತರ ನೌಕರರ ಸಂಘ (ರಿ) ಪಾವಟೆನಗರ ಧಾರವಾಡ. ಅವರು ದಿನಾಂಕ: 08–12–2023 ರ ಪತ್ರದಲ್ಲಿ ತಮ್ಮ ಸಂಘದ ವತಿಯಿಂದ ವಿಶ್ವವಿದ್ಯಾಲಯದಲ್ಲಿ ಸ್ನಾತಕ ಬಿ.ಕಾಂ (**Aggregate**) ಪದವಿಯಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **"Karnatak University Retired Non-teaching Employees Association"** ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವಂತೆ ವಿಶ್ವವಿದ್ಯಾಲಯದಲ್ಲಿ ಸುವರ್ಣ ಪದಕ ಸ್ಥಾಪಿಸಲು ಇಚ್ಛಿಸಿರುವರು.
02. ಸದರಿ ವಿಷಯದ ಕುರಿತು ದಿನಾಂಕ:02–11–2011 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ಸುವರ್ಣ ಪದಕ ಸ್ಥಾಪಿಸಲು ರೂಪಾಯಿ. 1,00,000/–(ರೂಪಾಯಿ ಒಂದು ಲಕ್ಷ ಮಾತ್ರ) ಪಾವತಿಸಲು ನಿರ್ಣಯಿಸಲಾಗಿದೆ. ಅದರಂತೆ ದಾನಿಗಳು ಹಣಕಾಸು ಅಧಿಕಾರಿಗಳು ಕ.ವಿ.ವಿ. ಧಾರವಾಡ ಇವರ ಹೆಸರಿನಲ್ಲಿ ಚೆಕ್ (ಚೆಕ್–ನಂ. 720346 ದಿನಾಂಕ: 08–12–2023) ಮೂಲಕ ರೂ. 1,00,000/–(ರೂಪಾಯಿ ಒಂದು ಲಕ್ಷ ಮಾತ್ರ) ಗಳನ್ನು ಘಟಿಕೋತ್ಸವ ಕಾರ್ಯಕ್ರಮದಲ್ಲಿ ಸುವರ್ಣ ಪದಕ ಪ್ರದಾನ ಮಾಡುವಂತೆ ಇಚ್ಛಿಸಿ ಪಾವತಿಸಿದ್ದಾರೆ. ಪ್ರಚಲಿತ ಅನುಶಾಸನದ ಪ್ರಕಾರ ದತ್ತಿ ನಿಧಿಯ ಠೇವಣಿಯಿಂದ ಬರುವ ಬಡ್ಡಿ ಮೊತ್ತದಿಂದ ಸುವರ್ಣ ಪದಕ ತಯಾರಿಸಲಾಗುವುದು.
03. ಈ ಪ್ರಸ್ತಾವನೆಯು ವಿಶ್ವವಿದ್ಯಾಲಯದ ಪ್ರಚಲಿತ ಅನುಶಾಸನದ ಪ್ರಕಾರ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಪೂರೈಸುತ್ತಿದ್ದು, ದಿನಾಂಕ:12–12–2015 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯ ನಿರ್ಣಯ ಸಂಖ್ಯೆ–13 ರಲ್ಲಿನ ನಿರ್ದೇಶನದಂತೆ ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಶಿಕ್ಷಕೇತರ ನೌಕರರ ಸಂಘದ ಸ್ವವಿವರದ ಮಾಹಿತಿಯನ್ನು ಪೂರೈಸಿದ್ದಾರೆ.
04. ದಿನಾಂಕ 07–03–2024 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ ಕಲಂ ನಂ–08 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ.

    ***"ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ ಬಿ.ಕಾಂ (Aggregate) ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ 'Karnatak University Retired Non-teaching Employees Association' ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಒಪ್ಪಿ ಅನುಮೋದಿಸಿತು."***
05. ಕಾರಣ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

ನಿರ್ಣಯ

ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ ಬಿ.ಕಾಂ (**Aggregate**) ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **'Karnatak University Retired Non-teaching Employees Association'** ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಪ್ರಸ್ತಾವನೆಗೆ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.



ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–18: ವಿಷಯ–:** ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ ಬಿ.ಎಸ್‌ಸಿ (**Aggregate**) ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **'Karnatak University Retired Non-teaching Employees Association'** ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಕುರಿತು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಪರಿಶೀಲನೆಗಾಗಿ ಮಂಡಿಸುವ ಕುರಿತು

ಟಿಪ್ಪಣಿ :–

01. ಅಧ್ಯಕ್ಷರು, ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಶಿಕ್ಷಕೇತರ ನೌಕರರ ಸಂಘ (ರಿ) ಪಾವಟೆನಗರ ಧಾರವಾಡ. ಅವರು ದಿನಾಂಕ: 08–12–2023 ರ ಪತ್ರದಲ್ಲಿ ತಮ್ಮ ಸಂಘದ ವತಿಯಿಂದ ವಿಶ್ವವಿದ್ಯಾಲಯದಲ್ಲಿ ಸ್ನಾತಕ ಬಿ.ಎಸ್‌ಸಿ (**Aggregate**) ಪದವಿಯಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **"Karnatak University Retired Non-teaching Employees Association"** ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವಂತೆ ವಿಶ್ವವಿದ್ಯಾಲಯದಲ್ಲಿ ಸುವರ್ಣ ಪದಕ ಸ್ಥಾಪಿಸಲು ಇಚ್ಛಿಸಿರುವರು.

02. ಸದರಿ ವಿಷಯದ ಕುರಿತು ದಿನಾಂಕ:02–11–2011 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ಸುವರ್ಣ ಪದಕ ಸ್ಥಾಪಿಸಲು ರೂಪಾಯಿ. 1,00,000/–(ರೂಪಾಯಿ ಒಂದು ಲಕ್ಷ ಮಾತ್ರ) ಪಾವತಿಸಲು ನಿರ್ಣಯಿಸಲಾಗಿದೆ. ಅದರಂತೆ ದಾನಿಗಳು ಹಣಕಾಸು ಅಧಿಕಾರಿಗಳು ಕ.ವಿ.ವಿ. ಧಾರವಾಡ ಇವರ ಹೆಸರಿನಲ್ಲಿ ಚೆಕ್ (ಚೆಕ್–ನಂ. 720345 ದಿನಾಂಕ: 08–12–2023) ಮೂಲಕ ರೂ. 1,00,000/–(ರೂಪಾಯಿ ಒಂದು ಲಕ್ಷ ಮಾತ್ರ) ಗಳನ್ನು ಘಟಿಕೋತ್ಸವ ಕಾರ್ಯಕ್ರಮದಲ್ಲಿ ಸುವರ್ಣ ಪದಕ ಪ್ರದಾನ ಮಾಡುವಂತೆ ಇಚ್ಛಿಸಿ ಪಾವತಿಸಿದ್ದಾರೆ. ಪ್ರಚಲಿತ ಅನುಶಾಸನದ ಪ್ರಕಾರ ದತ್ತಿ ನಿಧಿಯ ಠೇವಣಿಯಿಂದ ಬರುವ ಬಡ್ಡಿ ಮೊತ್ತದಿಂದ ಸುವರ್ಣ ಪದಕ ತಯಾರಿಸಲಾಗುವುದು.

03. ಈ ಪ್ರಸ್ತಾವನೆಯು ವಿಶ್ವವಿದ್ಯಾಲಯದ ಪ್ರಚಲಿತ ಅನುಶಾಸನದ ಪ್ರಕಾರ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಪೂರೈಸುತ್ತಿದ್ದು, ದಿನಾಂಕ:12–12–2015 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯ ನಿರ್ಣಯ ಸಂಖ್ಯೆ–13 ರಲ್ಲಿನ ನಿರ್ದೇಶನದಂತೆ ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಶಿಕ್ಷಕೇತರ ನೌಕರರ ಸಂಘದ ಸ್ವವಿವರದ ಮಾಹಿತಿಯನ್ನು ಪೂರೈಸಿದ್ದಾರೆ.

04. ದಿನಾಂಕ 07–03–2024 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ ಕಲಂ ನಂ–09 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ.

***"ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ ಬಿ.ಎಸ್‌ಸಿ (Aggregate) ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ 'Karnatak University Retired Non-teaching Employees Association' ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಒಪ್ಪಿ ಅನುಮೋದಿಸಿತು."***

05. ಕಾರಣ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

**ನಿರ್ಣಯ**

**ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ ಬಿ.ಎಸ್‌ಸಿ (Aggregate) ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ 'Karnatak University Retired Non-teaching Employees Association' ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಪ್ರಸ್ತಾವನೆಗೆ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.**



ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–19: ವಿಷಯ–:** ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ **MSW (Aggregate)** ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **'Karnatak University Retired Non-teaching Employees Association'** ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಕುರಿತು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಪರಿಶೀಲನೆಗಾಗಿ ಮಂಡಿಸುವ ಕುರಿತು

**ಟಿಪ್ಪಣಿ :**

01. ಅಧ್ಯಕ್ಷರು, ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಶಿಕ್ಷಕೇತರ ನೌಕರರ ಸಂಘ (ರಿ) ಪಾವಟೆನಗರ ಧಾರವಾಡ. ಅವರು ದಿನಾಂಕ: 08-12-2023 ರ ಪತ್ರದಲ್ಲಿ ತಮ್ಮ ಸಂಘದ ಪತಿಯಿಂದ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ **MSW (Aggregate)** ಪದವಿಯಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **"Karnatak University Retired Non-teaching Employees Association"** ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವಂತೆ ವಿಶ್ವವಿದ್ಯಾಲಯದಲ್ಲಿ ಸುವರ್ಣ ಪದಕ ಸ್ಥಾಪಿಸಲು ಇಚ್ಛಿಸಿರುವರು.

02. ಸದರಿ ವಿಷಯದ ಕುರಿತು ದಿನಾಂಕ:02-11-2011 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ಸುವರ್ಣ ಪದಕ ಸ್ಥಾಪಿಸಲು ರೂಪಾಯಿ. 1,00,000/-(ರೂಪಾಯಿ ಒಂದು ಲಕ್ಷ ಮಾತ್ರ) ಪಾವತಿಸಲು ನಿರ್ಣಯಿಸಲಾಗಿದೆ. ಅದರಂತೆ ದಾನಿಗಳು ಹಣಕಾಸು ಅಧಿಕಾರಿಗಳು ಕ.ವಿ.ವಿ. ಧಾರವಾಡ ಇವರ ಹೆಸರಿನಲ್ಲಿ ಚೆಕ್ (ಚೆಕ್-ನಂ. 720347 ದಿನಾಂಕ: 08-12-2023) ಮೂಲಕ ರೂ. 1,00,000/- (ರೂಪಾಯಿ ಒಂದು ಲಕ್ಷ ಮಾತ್ರ) ಗಳನ್ನು ಘಟಿಕೋತ್ಸವ ಕಾರ್ಯಕ್ರಮದಲ್ಲಿ ಸುವರ್ಣ ಪದಕ ಪ್ರದಾನ ಮಾಡುವಂತೆ ಇಚ್ಛಿಸಿ ಪಾವತಿಸಿದ್ದಾರೆ. ಪ್ರಚಲಿತ ಅನುಶಾಸನದ ಪ್ರಕಾರ ದತ್ತಿ ನಿಧಿಯ ಠೇವಣಿಯಿಂದ ಬರುವ ಬಡ್ಡಿ ಮೊತ್ತದಿಂದ ಸುವರ್ಣ ಪದಕ ತಯಾರಿಸಲಾಗುವುದು.

03. ಈ ಪ್ರಸ್ತಾವನೆಯು ವಿಶ್ವವಿದ್ಯಾಲಯದ ಪ್ರಚಲಿತ ಅನುಶಾಸನದ ಪ್ರಕಾರ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಪೂರೈಸುತ್ತಿದ್ದು, ದಿನಾಂಕ:12-12-2015 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯ ನಿರ್ಣಯ ಸಂಖ್ಯೆ-13 ರಲ್ಲಿನ ನಿರ್ದೇಶನದಂತೆ ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಶಿಕ್ಷಕೇತರ ನೌಕರರ ಸಂಘದ ಸ್ವವಿವರದ ಮಾಹಿತಿಯನ್ನು ಪೂರೈಸಿದ್ದಾರೆ.

04. ದಿನಾಂಕ 07-03-2024 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ ಕಲಂ ನಂ-10 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ.

> ***"ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ MSW (Aggregate) ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ 'Karnatak University Retired Non-teaching Employees Association' ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಒಪ್ಪಿ ಅನುಮೋದಿಸಿತು."***

05. ಕಾರಣ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

ನಿರ್ಣಯ

ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ **MSW (Aggregate)** ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **'Karnatak University Retired Non-teaching Employees Association'** ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಪ್ರಸ್ತಾವನೆಗೆ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.



A. Channappa
ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–20: ವಿಷಯ–:** ಕರ್ನಾಟಕ ವಿಶ್ವವಿದ್ಯಾಲಯದ M.Sc. Botany (Specialization in Tissue Culture) ಅಧ್ಯಯನದಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **"Dr.K. Nataraj and Dr. J.S.Patil"** ಇವರ ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಕುರಿತು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಪ್ರಸ್ತಾವನೆಯನ್ನು, ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಪರಿಶೀಲನೆಗಾಗಿ ಮಂಡಿಸುವ ಕುರಿತು

ಟಿಪ್ಪಣೆ :–

01. Dr. J. S. Patil, Shiva Nilaya, 31st Cross, H.No.27/3520, Lingaraja Nagar South, Hubballi-031 ಅವರು ದಿನಾಂಕ: 27.01.2024 ರ ಪತ್ರದಲ್ಲಿ, ವಿಶ್ವವಿದ್ಯಾಲಯದ M.Sc. Botany (Specialization in Tissue Culture) ಅಧ್ಯಯನದಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **"Dr.K. Nataraj and Dr. J.S.Patil"** ಇವರ ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವಂತೆ ವಿಶ್ವವಿದ್ಯಾಲಯದಲ್ಲಿ ಸುವರ್ಣ ಪದಕ ಸ್ಥಾಪಿಸಲು ಇಚ್ಛಿಸಿ ಮುಖ್ಯಸ್ಥರು, ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗ ಕ.ವಿ.ವಿ. ಧಾರವಾಡ ಇವರ ಮುಖಾಂತರ ವಿನಂತಿಸಿರುವರು.

02. ಸದರಿ ವಿಷಯದ ಕುರಿತು ದಿನಾಂಕ:02–11–2011 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ಸುವರ್ಣ ಪದಕ ಸ್ಥಾಪಿಸಲು ರೂಪಾಯಿ. 1,00,000/–(ರೂಪಾಯಿ ಒಂದು ಲಕ್ಷ ಮಾತ್ರ) ಪಾವತಿಸಲು ನಿರ್ಣಯಿಸಲಾಗಿದೆ. ಅದರಂತೆ ದಾನಿಗಳು ಹಣಕಾಸು ಅಧಿಕಾರಿಗಳು ಕ.ವಿ.ವಿ. ಧಾರವಾಡ ಇವರ ಹೆಸರಿನಲ್ಲಿ ಚೆಕ್(ಚೆಕ್–ನಂ. 147420 ದಿನಾಂಕ: 19.01.2024) ಮೂಲಕ ರೂ.1,10,000/–(ರೂಪಾಯಿ ಒಂದು ಲಕ್ಷ ಹತ್ತು ಸಾವಿರ ಮಾತ್ರ) ಗಳನ್ನು ಮುಂಬರುವ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಸುವರ್ಣ ಪದಕ ಪ್ರದಾನ ಮಾಡುವಂತೆ ಇಚ್ಛಿಸಿ ಪಾವತಿಸಿದ್ದಾರೆ. ಪ್ರಚಲಿತ ಅನುಶಾಸನದ ಪ್ರಕಾರ ದತ್ತಿ ನಿಧಿಯ ಠೇವಣಿಯಿಂದ ಬರುವ ಬಡ್ಡಿ ಮೊತ್ತದಿಂದ ಸುವರ್ಣ ಪದಕ ತಯಾರಿಸಲಾಗುವುದು. (ಪ್ರಸ್ತುತ ಜರುಗುವ 74ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಸುವರ್ಣಪದಕ ಪ್ರದಾನ ಮಾಡಲು ರೂ.10,000/–ಗಳನ್ನು ಹೆಚ್ಚುವರಿಯಾಗಿ ಪಾವತಿಸಿದ್ದಾರೆ)

03. ಈ ಪ್ರಸ್ತಾವನೆಯು ವಿಶ್ವವಿದ್ಯಾಲಯದ ಪ್ರಚಲಿತ ಅನುಶಾಸನದ ಪ್ರಕಾರ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಪೂರೈಸುತ್ತಿದ್ದು, ದಿನಾಂಕ:12–12–2015 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯ ನಿರ್ಣಯ ಸಂಖ್ಯೆ–13 ರಲ್ಲಿನ ನಿರ್ದೇಶನದಂತೆ ದಾನಿಗಳು 'Dr.K. Nataraj and Dr. J.S.Patil' ಇವರ ಸ್ವವಿವರದ ಮಾಹಿತಿಯನ್ನು ಪೂರೈಸಿದ್ದಾರೆ.

04. ದಿನಾಂಕ 07–03–2024 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ ಕಲಂ ನಂ–11 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ.

***"ಕರ್ನಾಟಕ ವಿಶ್ವವಿದ್ಯಾಲಯದ M.Sc. Botany (Specialization in Tissue Culture) ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ "Dr.K. Nataraj and Dr. J.S.Patil" ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಒಪ್ಪಿ ಅನುಮೋದಿಸಿತು."***

05. ಕಾರಣ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

ನಿರ್ಣಯ

ಕರ್ನಾಟಕ ವಿಶ್ವವಿದ್ಯಾಲಯದ **M.Sc. Botany (Specialization in Tissue Culture)** ಅಧ್ಯಯನದಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **"Dr.K. Nataraj and Dr. J.S.Patil"** ಇವರ ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಪ್ರಸ್ತಾವನೆಗೆ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.



ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–21: ವಿಷಯ–:** ಕರ್ನಾಟಕ ವಿಶ್ವವಿದ್ಯಾಲಯದ ಎಂ.ಎಸ್‌ಸಿ (ಗಣಿತಶಾಸ್ತ್ರ) ಅಧ್ಯಯನದಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿನಿ (Lady Student) ಗೆ "Smt Yallubai K. Hassan" ಇವರ ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಕುರಿತು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಪರಿಶೀಲನೆಗಾಗಿ ಮಂಡಿಸುವ ಕುರಿತು

**ಟಿಪ್ಪಣಿ :**

01. ಶ್ರೀ ಅನಿಲಕುಮಾರ ಕೆ. ಹಾಸನ, (ನಿವೃತ್ತ ಉಪಕುಲಸಚಿವರು ಕ.ವಿ.ವಿ. ಧಾರವಾಡ), ವಿಜಯಾನಂದ ನಗರ ರಾಣಿಚೆನ್ನಮ್ಮ ನಗರ ಹತ್ತಿರ, ಧಾರವಾಡ. ಅವರು ದಿನಾಂಕ: 12.01.2024 ರ ಪತ್ರದಲ್ಲಿ, ತಮ್ಮ ತಾಯಿಯವರ ಸ್ಮರಣಾರ್ಥವಾಗಿ ವಿಶ್ವವಿದ್ಯಾಲಯದ M.Sc.(Mathematics) ಗಣಿತಶಾಸ್ತ್ರ ಅಧ್ಯಯನದಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ **ವಿದ್ಯಾರ್ಥಿನಿಗೆ (Lady Student) "Smt Yallubai K. Hassan"** ಇವರ ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವಂತೆ ವಿಶ್ವವಿದ್ಯಾಲಯದಲ್ಲಿ ಸುವರ್ಣ ಪದಕ ಸ್ಥಾಪಿಸಲು ಇಚ್ಛಿಸಿರುವರು.
02. ಸದರಿ ವಿಷಯದ ಕುರಿತು ದಿನಾಂಕ:02–11–2011 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ಸುವರ್ಣ ಪದಕ ಸ್ಥಾಪಿಸಲು ರೂಪಾಯಿ. 1,00,000/–(ರೂಪಾಯಿ ಒಂದು ಲಕ್ಷ ಮಾತ್ರ) ಪಾವತಿಸಲು ನಿರ್ಣಯಿಸಲಾಗಿದೆ. ಅದರಂತೆ ದಾನಿಗಳು ಹಣಕಾಸು ಅಧಿಕಾರಿಗಳು ಕ.ವಿ.ವಿ. ಧಾರವಾಡ ಇವರ ಹೆಸರಿನಲ್ಲಿ ಚೆಕ್(ಚೆಕ್–ನಂ. 325280 ದಿನಾಂಕ: 12.01.2024) ಮೂಲಕ ರೂ.1,10,000/–(ರೂಪಾಯಿ ಒಂದು ಲಕ್ಷ ಹತ್ತು ಸಾವಿರ ಮಾತ್ರ) ಗಳನ್ನು ಮುಂಬರುವ ವಿಶ್ವವಿದ್ಯಾಲಯದ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಸುವರ್ಣ ಪದಕ ಪ್ರದಾನ ಮಾಡುವಂತೆ ಇಚ್ಛಿಸಿ ಪಾವತಿಸಿದ್ದಾರೆ. ಪ್ರಚಲಿತ ಅನುಶಾಸನದ ಪ್ರಕಾರ ದತ್ತಿ ನಿಧಿಯ ಠೇವಣಿಯಿಂದ ಬರುವ ಬಡ್ಡಿ ಮೊತ್ತದಿಂದ ಸುವರ್ಣ ಪದಕ ತಯಾರಿಸಲಾಗುವುದು. (ಪ್ರಸ್ತುತ ಸಾಲಿನಲ್ಲಿ ಜರುಗುವ 74ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಸುವರ್ಣಪದಕ ಪ್ರದಾನ ಮಾಡಲು ರೂ.10,000/–ಗಳನ್ನು ಹೆಚ್ಚುವರಿಯಾಗಿ ಪಾವತಿಸಿದ್ದಾರೆ)
03. ಈ ಪ್ರಸ್ತಾವನೆಯು ವಿಶ್ವವಿದ್ಯಾಲಯದ ಪ್ರಚಲಿತ ಅನುಶಾಸನದ ಪ್ರಕಾರ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಪೂರೈಸುತ್ತಿದ್ದು, ದಿನಾಂಕ:12–12–2015 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯ ನಿರ್ಣಯ ಸಂಖ್ಯೆ–13 ರಲ್ಲಿನ ನಿರ್ದೇಶನದಂತೆ ದಾನಿಗಳು 'Smt Yallubai K. Hassan' ಇವರ ಸ್ವವಿವರದ ಮಾಹಿತಿಯನ್ನು ಪೂರೈಸಿದ್ದಾರೆ.
04. ದಿನಾಂಕ 07–03–2024 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ ಕಲಂ ನಂ–12 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ.

    ***"ಕರ್ನಾಟಕ ವಿಶ್ವವಿದ್ಯಾಲಯದ ಎಂ.ಎಸ್‌ಸಿ (ಗಣಿತಶಾಸ್ತ್ರ) ಅಧ್ಯಯನದಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿನಿ (Lady Student) ಗೆ "Smt Yallubai K. Hassan" ಇವರ ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಒಪ್ಪಿ ಅನುಮೋದಿಸಿತು."***

05. ಕಾರಣ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

ನಿರ್ಣಯ

ಕರ್ನಾಟಕ ವಿಶ್ವವಿದ್ಯಾಲಯದ ಎಂ.ಎಸ್‌ಸಿ (ಗಣಿತಶಾಸ್ತ್ರ) ಅಧ್ಯಯನದಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿನಿ **(Lady Student)** ಗೆ **"Smt Yallubai K. Hassan"** ಇವರ ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಪ್ರಸ್ತಾವನೆಗೆ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.

–

–



ಕುಲಸಚಿವರು

ಕುಲಪತಿಗಳು

<u>ಕಲಂ ಸಂಖ್ಯೆ-22: ವಿಷಯ-</u>: ಕರ್ನಾಟಕ ವಿಶ್ವವಿದ್ಯಾಲಯದ M.Sc. (Physics) ಭೌತಶಾಸ್ತ್ರ ಅಧ್ಯಯನದಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ "Smt Gangabai Koliwad" ಇವರ ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಕುರಿತು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಪರಿಶೀಲನೆಗಾಗಿ ಮಂಡಿಸುವ ಕುರಿತು

**ಟಿಪ್ಪಣಿ :**

01. Dr. Krishna Mahadev Koliwad, Paulette Place, Lacanada, California-91011 USA ಅವರು ದಿನಾಂಕ: 20.01.2024 ರ ಪತ್ರದಲ್ಲಿ, ತಮ್ಮ ತಾಯಿಯವರ ಸ್ಮರಣಾರ್ಥವಾಗಿ ವಿಶ್ವವಿದ್ಯಾಲಯದ M.Sc. (Physics) ಭೌತಶಾಸ್ತ್ರ ಅಧ್ಯಯನದಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **"Smt Gangabai Koliwad"** ಇವರ ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವಂತೆ ವಿಶ್ವವಿದ್ಯಾಲಯದಲ್ಲಿ ಸುವರ್ಣ ಪದಕ ಸ್ಥಾಪಿಸಲು ಇಚ್ಛಿಸಿರುವರು.

02. ಸದರಿ ವಿಷಯದ ಕುರಿತು ದಿನಾಂಕ:02-11-2011 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ಸುವರ್ಣ ಪದಕ ಸ್ಥಾಪಿಸಲು ರೂಪಾಯಿ. 1,00,000/-(ರೂಪಾಯಿ ಒಂದು ಲಕ್ಷ ಮಾತ್ರ) ಪಾವತಿಸಲು ನಿರ್ಣಯಿಸಲಾಗಿದೆ. ಅದರಂತೆ ದಾನಿಗಳು ಹಣಕಾಸು ಅಧಿಕಾರಿಗಳು ಕ.ವಿ.ವಿ. ಧಾರವಾಡ ಇವರ ಹೆಸರಿನಲ್ಲಿ ಚೆಕ್(ಚೆಕ್-ನಂ. 166402 & 166403 ದಿನಾಂಕ: 19.01.2024) ಮೂಲಕ ರೂ.1,10,000/-(ರೂಪಾಯಿ ಒಂದು ಲಕ್ಷ ಹತ್ತು ಸಾವಿರ ಮಾತ್ರ) ಗಳನ್ನು ಮುಂಬರುವ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಸುವರ್ಣ ಪದಕ ಪ್ರದಾನ ಮಾಡುವಂತೆ ಇಚ್ಛಿಸಿ ಪಾವತಿಸಿದ್ದಾರೆ. ಪ್ರಚಲಿತ ಅನುಶಾಸನದ ಪ್ರಕಾರ ದತ್ತಿ ನಿಧಿಯ ಠೇವಣಿಯಿಂದ ಬರುವ ಬಡ್ಡಿ ಮೊತ್ತದಿಂದ ಸುವರ್ಣ ಪದಕ ತಯಾರಿಸಲಾಗುವುದು. (ಪ್ರಸ್ತುತ ಜರುಗುವ 74ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಸುವರ್ಣಪದಕ ಪ್ರದಾನ ಮಾಡಲು ರೂ.10,000/-ಗಳನ್ನು ಹೆಚ್ಚುವರಿಯಾಗಿ ಪಾವತಿಸಿದ್ದಾರೆ)

03. ಈ ಪ್ರಸ್ತಾವನೆಯು ವಿಶ್ವವಿದ್ಯಾಲಯದ ಪ್ರಚಲಿತ ಅನುಶಾಸನದ ಪ್ರಕಾರ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಪೂರೈಸುತ್ತಿದ್ದು, ದಿನಾಂಕ:12-12-2015 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ ಸಂಖ್ಯೆ-13 ರಲ್ಲಿನ ನಿರ್ದೇಶನದಂತೆ ದಾನಿಗಳು 'Smt Gangabai Koliwad' ಇವರ ಸ್ವವಿವರದ ಮಾಹಿತಿಯನ್ನು ಪೂರೈಸಿದ್ದಾರೆ.

04. ದಿನಾಂಕ 07-03-2024 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ ಕಲಂ ನಂ-13 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ.

*"ಕರ್ನಾಟಕ ವಿಶ್ವವಿದ್ಯಾಲಯದ **M.Sc. (Physics)** ಭೌತಶಾಸ್ತ್ರ ಅಧ್ಯಯನದಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **"Smt Gangabai Koliwad"** ಇವರ ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಒಪ್ಪಿ ಅನುಮೋದಿಸಿತು."*

06. ಕಾರಣ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

ನಿರ್ಣಯ

ಕರ್ನಾಟಕ ವಿಶ್ವವಿದ್ಯಾಲಯದ **M.Sc. (Physics)** ಭೌತಶಾಸ್ತ್ರ ಅಧ್ಯಯನದಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **"Smt Gangabai Koliwad"** ಇವರ ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಪ್ರಸ್ತಾವನೆಗೆ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.



A. Channappa
ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–23: ವಿಷಯ–:** ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ M.A. Sociology ಅಧ್ಯಯನದ ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **'Laxmi Kashinath Jadhav'** ಇವರ ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಪರಿಶೀಲನೆಗಾಗಿ ಮಂಡಿಸುವ ಕುರಿತು

ಟಿಪ್ಪಣಿ :

1. ಶ್ರೀಮತಿ ಲಕ್ಷ್ಮೀ ಕಾಶೀನಾಥ ಜಾಧವ, C/o. ಡಾ.ರೇಖಾ ಕೆ. ಜಾಧವ, (Professor in Sociology), ಮೈಸೂರು ವಿಶ್ವವಿದ್ಯಾಲಯ ಮೈಸೂರು, R-1 Quarters. ಮಾನಸ ಗಂಗೋತ್ರಿ, ಜೆ.ಸಿ.ಕಾಲೇಜು ರಸ್ತೆ, ಮೈಸೂರು–570006 ಇವರು ದಿನಾಂಕ:05.12.2023 ರ ತಮ್ಮ ಪತ್ರದಲ್ಲಿ ತಾವು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿ ಸಹಾಯಕ ಕುಲಸಚಿವೆಯಾಗಿ ಮಾರ್ಚ 2006 ರಲ್ಲಿ ನಿವೃತ್ತಿ ಹೊಂದಿರುತ್ತೇನೆಂದು ತಿಳಿಸಿ, ವಿಶ್ವವಿದ್ಯಾಲಯದ ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ವಿಷಯದ ಪದವಿಯ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ಅವರ ಸಾಧನೆ ಗೌರವಿಸಿ **"Laxmi Kashinath Jadhav"** ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವಂತೆ ವಿಶ್ವವಿದ್ಯಾಲಯದಲ್ಲಿ ಸುವರ್ಣ ಪದಕ ಸ್ಥಾಪಿಸಲು ಇಚ್ಛಿಸಿ ವಿನಂತಿಸಿರುವರು.
2. ಸದರಿ ವಿಷಯದ ಕುರಿತು ದಿನಾಂಕ:02–11–2011 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ಸುವರ್ಣ ಪದಕ ಸ್ಥಾಪಿಸಲು ರೂಪಾಯಿ.1,00,000/–(ರೂಪಾಯಿ ಒಂದು ಲಕ್ಷ ಮಾತ್ರ) ಪಾವತಿಸಲು ನಿರ್ಣಯಿಸಲಾಗಿದೆ. ಅದರಂತೆ ದಾನಿಗಳು ಹಣಕಾಸು ಅಧಿಕಾರಿಗಳು ಕ.ವಿ.ವಿ. ಧಾರವಾಡ ಇವರ ಹೆಸರಿನಲ್ಲಿ ಚೆಕ್(ಚೆಕ್–ನಂ. 968496 ದಿನಾಂಕ: 05–12–2023) ಮೂಲಕ ರೂ.1,00,000/–(ರೂಪಾಯಿ ಒಂದು ಲಕ್ಷ ಮಾತ್ರ) ಗಳನ್ನು ಘಟಿಕೋತ್ಸವ ಕಾರ್ಯಕ್ರಮದಲ್ಲಿ ಸುವರ್ಣ ಪದಕ ಪ್ರದಾನ ಮಾಡುವಂತೆ ಇಚ್ಛಿಸಿ ಪಾವತಿಸಿದ್ದಾರೆ. ಪ್ರಚಲಿತ ಅನುಶಾಸನದ ಪ್ರಕಾರ ದತ್ತಿ ನಿಧಿಯ ಠೇವಣಿಯಿಂದ ಬರುವ ಬಡ್ಡಿ ಮೊತ್ತದಿಂದ ಸುವರ್ಣ ಪದಕ ತಯಾರಿಸಲಾಗುವುದು.
3. ಈ ಪ್ರಸ್ತಾವನೆಯು ವಿಶ್ವವಿದ್ಯಾಲಯದ ಪ್ರಚಲಿತ ಅನುಶಾಸನದ ಪ್ರಕಾರ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಪೂರೈಸುತ್ತಿದ್ದು, ದಿನಾಂಕ:12–12–2015 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯ ನಿರ್ಣಯ ಸಂಖ್ಯೆ–13 ರಲ್ಲಿನ ನಿರ್ದೇಶನದಂತೆ 'ಶ್ರೀಮತಿ ಲಕ್ಷ್ಮೀ ಕಾಶೀನಾಥ ಜಾಧವ' ಇವರ ಕಿರುಪರಿಚಯ/ ಸ್ವವಿವರದ ಮಾಹಿತಿಯನ್ನು ಪೂರೈಸಿದ್ದಾರೆ.
4. ದಿನಾಂಕ 07–03–2024 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ ಕಲಂ ನಂ–14 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ.

   ***"ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ M.A. Sociology ಅಧ್ಯಯನದ ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ 'Laxmi Kashinath Jadhav' ಇವರ ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಒಪ್ಪಿ ಅನುಮೋದಿಸಿತು."***

5. ಕಾರಣ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ M.A. Sociology ಅಧ್ಯಯನದ ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ 'Laxmi Kashinath Jadhav' ಇವರ ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಪ್ರಸ್ತಾವನೆಗೆ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.**



ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–24: ವಿಷಯ–:** ಕರ್ನಾಟಕ ಕಲಾ ಮಹಾವಿದ್ಯಾಲಯದ ಬಿ.ಎ ಪದವಿಯ 3rd & 4th ಸೆಮಿಸ್ಟರನ ಒಟ್ಟು ಅಂಕಗಳಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪಾಸಾದ ಅಂಗವಿಕಲ ವಿದ್ಯಾರ್ಥಿಗೆ "Smt, Vanajakshi and Shri Sheshadri Iyengar Cash Prize Instituted by Prof K.S. Radhamani" ಇವರ ಹೆಸರಿನಲ್ಲಿ ನಗದು ಪಾರಿತೋಷಕವನ್ನು ಪ್ರದಾನ ಮಾಡುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಪರಿಶೀಲನೆಗಾಗಿ ಮಂಡಿಸುವ ಕುರಿತು

ಟಿಪ್ಪಣಿ:

01. ಕರ್ನಾಟಕ ಮಹಾವಿದ್ಯಾಲಯದ ಸ್ನಾತಕ ಬಿ.ಎ ಪದವಿಯ 3rd & 4th ಸೆಮಿಸ್ಟರನಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪಾಸಾದ ಅಂಗವಿಕಲ (Physically Disabled) ವಿದ್ಯಾರ್ಥಿಗೆ **"Smt, Vanajakshi and Shri Sheshadri Iyengar Cash Prize Instituted by Prof K.S. Radhamani"** ಇವರ ಹೆಸರಿನಲ್ಲಿ ನಗದು ಪಾರಿತೋಷಕವನ್ನು ಸ್ಥಾಪಿಸಿ ಘಟಿಕೋತ್ಸವ ಸಮಾರಂಭದಲ್ಲಿ ಪ್ರದಾನ ಮಾಡಲು ಅನುಮೋದನೆ ಪಡೆಯಲು ಪ್ರಸ್ತಾವನೆಯನ್ನು ದಿನಾಂಕ 31.08.2023 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಲಾಗಿತ್ತು, ಸದರಿ ಸಭೆಯಲ್ಲಿ ಈ ಕೆಳಗಿನಂತೆ ನಿರ್ಣಯಿಸಲಾಗಿದೆ.

| ಕಲಂ ನಂ. | ಪ್ರಸ್ತಾವನೆ | ನಡುವಳಿ |
|---|---|---|
| 36 | ಕರ್ನಾಟಕ ಮಹಾವಿದ್ಯಾಲಯದ ಸ್ನಾತಕ ಬಿ.ಎ ಪದವಿಯ 3rd & 4th ಸೆಮಿಸ್ಟರನಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪಾಸಾದ ಅಂಗವಿಕಲ (Physically Disabled) ವಿದ್ಯಾರ್ಥಿಗೆ **"Smt, Vanajakshi and Shri Sheshadri Iyengar Cash Prize Instituted by Prof K.S. Radhamani"** ಇವರ ಹೆಸರಿನಲ್ಲಿ ನಗದು ಪಾರಿತೋಷಕವನ್ನು ಪ್ರದಾನ ಮಾಡುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ್ ಪರಿಷತ್ ಸಭೆಯಲ್ಲಿ ಪರಿಶೀಲಿಸುವ ಕುರಿತು. | ವಿದ್ಯಾವಿಷಯಕ ಪರಿಷತ್ ಸಭೆಯು ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕುರಿತಂತೆ ದಾನಿಗಳಿಂದ ಸ್ಪಷ್ಟತೆಯನ್ನು ಪಡೆದು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು. ಅದರಂತೆ ವಿಷಯ ಮುಂದೂಡಲಾಯಿತು. |

02. ವಿದ್ಯಾವಿಷಯಕ ಪರಿಷತ್ ಸಭೆಯ ನಡುವಳಿಯಂತೆ ದಾನಿಗಳಿಗೆ ಪತ್ರ ಬರೆದು ಸ್ಪಷ್ಟೀಕರಣ ಕೇಳಲಾಗಿತ್ತು. ಅದರಂತೆ ದಾನಿಗಳು ಈ ಕೆಳಗಿನಂತೆ ಸ್ಪಷ್ಟೀಕರಣ ನೀಡಿ ವಿನಂತಿಸಿರುವರು.

'ನಗದು **ಪಾರಿತೋಷಕ ಪ್ರದಾನ ಮಾಡಲು ನಾನು ತಿಳಿಯಪಡಿಸುವುದೇನೆಂದರೆ,** ಪಾರಿತೋಷಕಕ್ಕೆ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಅಂಗವಿಕಲ ವಿದ್ಯಾರ್ಥಿಗಳಲ್ಲಿ ಬಿ.ಎ **3rd & 4th ಸೆಮಿಸ್ಟರನ ಒಟ್ಟು ಅಂಕಗಳಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಯನ್ನು ಪರಿಗಣಿಸಬೇಕೆಂದು** ನನ್ನ ಅಭಿಪ್ರಾಯ ಕಾರಣ ನಗದು ಪರಿತೋಷಕವನ್ನು ಪ್ರದಾನ ಮಾಡಲು **'ವಿದ್ಯಾರ್ಥಿಯು ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಅಂಗವಿಕಲ ವಿದ್ಯಾರ್ಥಿಯಾಗಿರಬೇಕು ಮತ್ತು ಬಿ.ಎ ಪದವಿಯ 3rd & 4th ಸೆಮಿಸ್ಟರನ ಒಟ್ಟು ಅಂಕಗಳಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದಿರಬೇಕು'** ಅಂತಹ ವಿದ್ಯಾರ್ಥಿಯನ್ನು ಆಯ್ಕೆ ಮಾಡಬೇಕೆಂದು ಸ್ಪಷ್ಟೀಕರಣ ನೀಡಿ ತಮ್ಮಲ್ಲಿ ಮತ್ತೊಮ್ಮೆ ವಿನಂತಿಸಿಕೊಳ್ಳುತ್ತೇನೆ.'

03. ದಿನಾಂಕ 07-03-2024 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ ಕಲಂ ನಂ-15 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ.

***"ಕರ್ನಾಟಕ ಕಲಾ ಮಹಾವಿದ್ಯಾಲಯದ ಬಿ.ಎ ಪದವಿಯ 3rd & 4th ಸೆಮಿಸ್ಟರನ ಒಟ್ಟು ಅಂಕಗಳಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪಾಸಾದ ಅಂಗವಿಕಲ ವಿದ್ಯಾರ್ಥಿಗೆ "Smt, Vanajakshi and Shri Sheshadri Iyengar Cash Prize Instituted by Prof K.S. Radhamani" ಇವರ ಹೆಸರಿನಲ್ಲಿ ನಗದು ರೂ.60,000/- ಪಾರಿತೋಷಕವನ್ನು ಪ್ರದಾನ ಮಾಡುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಒಪ್ಪಿ ಅನುಮೋದಿಸಿತು."***



ಕುಲಸಚಿವರು

ಕುಲಪತಿಗಳು

04. ಕಾರಣ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

ನಿರ್ಣಯ

ಕರ್ನಾಟಕ ಕಲಾ ಮಹಾವಿದ್ಯಾಲಯದ ಬಿ.ಎ ಪದವಿಯ 3rd & 4th ಸೆಮಿಸ್ಟರನ ಒಟ್ಟು ಅಂಕಗಳಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪಾಸಾದ ಅಂಗವಿಕಲ ವಿದ್ಯಾರ್ಥಿಗೆ **"Smt, Vanajakshi and Shri Sheshadri Iyengar Cash Prize Instituted by Prof K.S. Radhamani"** ಇವರ ಹೆಸರಿನಲ್ಲಿ ನಗದು ಪಾರಿತೋಷಕವನ್ನು ಪ್ರದಾನ ಮಾಡುವ ಪ್ರಸ್ತಾವನೆಗೆ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.

\-

\-

\-

\-

\-

\-

\-

\-

\-

\-

\-

\-

\-

\-

\-

\-

\-

\-



ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–25: ವಿಷಯ–:** ಸನ್ 2014–15 ರಿಂದ 2023–24 ರವರೆಗೆ ಜಿ.ಪಿ.ಎಫ್ ಪರಿಷ್ಕೃತ ಲೆಕ್ಕ ಪತ್ರದಂತೆ ಚಂದಾದಾರರಿಗೆ ಪಾವತಿ ಮಾಡಿದ ಬಗ್ಗೆ ದೃಢೀಕರಣ ಕುರಿತು

ಟಿಪ್ಪಣಿ:

ದಿನಾಂಕ: 7–3–2024 ರಂದು ಜರುಗಿದ ಸಿಂಡಿಕೇಟ ಸಭೆಯ ಕಲಂ ನಂ.32 ರ ನಿರ್ಣಯದಂತೆ ಕರ್ನಾಟಕ ವಿಶ್ವವಿದ್ಯಾಲಯದ ಜಿ.ಪಿ.ಎಫ್ ವಂತಿಗೆದಾರರಿಗೆ ಇಲ್ಲಿಯವರೆಗೆ ಸುಮಾರು 296 ಸಿಬ್ಬಂದಿಗಳಿಗೆ ಹಾಗೂ 11 ಜನ ನಿವೃತ್ತ ಸಿಬ್ಬಂದಿಗಳಿಗೆ ಒಟ್ಟು ರೂ.46,51,66,221/– ಗಳನ್ನು ಪಾವತಿ ಮಾಡಲಾಗಿರುತ್ತದೆ. ಸದರ ಪಾವತಿಗಾಗಿ ಈ ಕೆಳಕಂಡಂತೆ ಹಣದ ಕ್ರೂಢೀಕರಣ ಮಾಡಲಾಗಿರುತ್ತದೆ.

| | |
|---|---|
| 1) ಜಿ.ಪಿ.ಎಫ್ ಎಸ್.ಬಿ.ಖಾತೆಯಲ್ಲಿ ಇದ್ದ ಮೊತ್ತ | ರೂ. 2,41,61,619.00 |
| 2) ಜಿ.ಪಿ.ಎಫ್ ಠೇವಣಿ ಮುರಿಸಿದ ಮೊತ್ತ | ರೂ.42,54,93,455.00 |
| 3) ಜಿ.ಪಿ.ಎಫ್ ಠೇವಣಿ ಮೇಲಿನ ಬಡ್ಡಿ ಹಾಗೂ ಫೆಬ್ರುವರಿ 2024 ನೇ ತಿಂಗಳ ವಂತಿಗೆ ಮತ್ತು ಸಾಲದ ಕಂತು | ರೂ. 83,79,987.00 |
| 4) ವಿವಿಧ ಖಾತೆಗಳಿಂದ ವರ್ಗಾವಣೆ ಮಾಡಿಕೊಂಡ ಮೊತ್ತ | ರೂ. 1,87,61,000.00 |
| | ರೂ.47,67,96,061.00 |

| Sl.No | Detail | Amount |
|---|---|---|
| 1 | Already paid amount | 46,51,66,221.00 |
| 2 | To be paid | 1,16,03,947.00 |
| 3 | Balance Amount in SB A/C | 25,893.00 |
| | Total | 47,67,96,061.00 |

ಜಿ.ಪಿ.ಎಫ್ ಖಾತೆಯಿಂದ ಇನ್ನು 12 ಜನ ಸಿಬ್ಬಂದಿಗಳಿಗೆ ಪಾವತಿ ಮಾಡುವುದು ಬಾಕಿ ಇದ್ದು, ಸದರಿ ಸಿಬ್ಬಂದಿಗಳು ಅರ್ಜಿ ಸಲ್ಲಿಸದೇ ಇರುವುದರಿಂದ ಪಾವತಿ ಮಾಡಲಾಗಿರುವುದಿಲ್ಲ. ಸದರ ಸಿಬ್ಬಂದಿಗಳ ವಿವರ ಈ ಕೆಳಗಿನಂತಿದೆ.

| Sl.No | Name | Amount |
|---|---|---|
| 1 | S T Bagalkoti | 29,78,908.00 |
| 2 | S S Badigannavar | 30,12,799.00 |
| 3 | J V Yenagi | 19,53,113.00 |
| 4 | M R Gatti | 2,62,958.00 |
| 5 | T M Bhaskar | 16,92,236.00 |
| 6 | N M Sunagar | 1,51,285.00 |
| 7 | S B Bhajantri | 2,35,413.00 |
| 8 | C B Savalagi | 2,35,596.00 |
| 9 | M V Boodannavar | 65,105.00 |
| 10 | G G Madar | 2,18,607.00 |
| 11 | L H Bhajantri | 5,74,783.00 |
| 12 | I S Tigadimath | 2,23,144.00 |
| | TOTAL | 1,16,03,947.00 |



ಕುಲಸಚಿವರು ಕುಲಪತಿಗಳು

ಸದರಿ ಸಿಬ್ಬಂದಿಗಳಿಗೆ ಒಟ್ಟು ರೂ.1,16,03,947/– ಗಳನ್ನು ಮಾಡುವುದು ಬಾಕಿ ಇದ್ದು ಸದರಿ ಸಿಬ್ಬಂದಿಗಳು ಅರ್ಜಿ ಸಲ್ಲಿಸಿದ ನಂತರ ಜಿ.ಪಿ.ಎಫ್ ಅಂತಿಮ ಪಾವತಿಗಾಗಿ ಕ್ರಮವಹಿಸಲಾಗುವುದು. ಎಲ್ಲ ಸಿಬ್ಬಂದಿಗಳ ಪಾವತಿಯ ನಂತರ ರೂ.25,893/– ಗಳು ಖಾತೆಯಲ್ಲಿ ಉಳಿಕೆಯಾಗುತ್ತವೆ.

ಚಾರ್ಟರ್ಡ ಅಕೌಂಟಂಟರವರಾದ ಮೇಸರ್ಸ.ಮಂಜುನಾಥ ಸೋಮಪೂರ & ಕಂಪನಿ, ಧಾರವಾಡ ಇವರಿಗೆ ಸನ್ 2014–15 ರಿಂದ 2023–24 ರವರೆಗೆ ಜಿ.ಪಿ.ಎಫ್ ಪರಿಷ್ಕರಣೆ ಲೆಕ್ಕ ಪತ್ರ ಕಾರ್ಯದ ಬಿಲ್ ರೂ.3,54,000/– ಗಳನ್ನು ಲೆಕ್ಕ ಶೀರ್ಷಿಕೆ ಆಡಿಟ್ ಶುಲ್ಕ 1425 ರಿಂದ ಪಾವತಿ ಮಾಡಲಾಗಿರುತ್ತದೆ.

ಮುಂದುವರೆದು, ಸನ್ 2014–15 ರಿಂದ ಇಲ್ಲಿಯವರೆಗೆ ಸೇವೆಯಿಂದ ನಿವೃತ್ತರಾದ ಸಿಬ್ಬಂದಿಗಳಿಂದ ಹೆಚ್ಚಿಗೆ ಪಾವತಿ ಮಾಡಲಾದ ಬಡ್ಡಿ ಹಣವನ್ನು ವಸೂಲಾತಿ ಮಾಡಬೇಕಾಗಿರುತ್ತದೆ. ಇದಕ್ಕಾಗಿ ಉಪ ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯು ಪರಿಶೀಲಿಸಿ, ವರದಿ ಸಲ್ಲಿಸಿದ ನಿರ್ಣಯದ ಪ್ರಕಾರ ಕ್ರಮವಹಿಸಲಾಗುವುದು.

ಕಾರಣ ಸದರ ಮಾಹಿತಿಯನ್ನು ಸಿಂಡಿಕೇಟ ಸಭೆಯ ದೃಢೀಕರಣಕ್ಕಾಗಿ ಮಂಡಿಸಲಾಯಿತು.

## ನಿರ್ಣಯ

**ಸನ್ 2014–15 ರಿಂದ 2023–24 ರವರೆಗೆ ಜಿ.ಪಿ.ಎಫ್ ಪರಿಷ್ಕೃತ ಲೆಕ್ಕ ಪತ್ರದಂತೆ ಚಂದಾದಾರರಿಗೆ ಹಣ ಪಾವತಿ ಮಾಡಿದ ಬಗ್ಗೆ ಈಗಾಗಲೇ ಕೈಗೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು. ಮುಂದುವರೆದು, ಪ್ರಸ್ತಾವನೆಯಲ್ಲಿಯ ಬಾಕಿ ಉಳಿದ ಚಂದಾದಾರರ ಜಿ.ಪಿ.ಎಫ್. ಹಣ ಪಾವತಿಸಲು ನಿಯಮಾನುಸಾರ ಕ್ರಮ ಜರುಗಿಸಲು, ಚಾರ್ಟರ್ಡ ಅಕೌಂಟೆಂಟ ಅವರ ಜಿ.ಪಿ.ಎಫ್. ಪರಿಷ್ಕರಣೆ ಲೆಕ್ಕ ಪತ್ರ ಕಾರ್ಯದ ಬಿಲ್ ಪಾವತಿಸಲು ಹಾಗೂ ಸನ್ 2014–15 ರಿಂದ ಈವರೆಗೂ ಸೇವೆಯಿಂದ ನಿವೃತ್ತರಾದ ಸಿಬ್ಬಂದಿಗಳಿಂದ ಹೆಚ್ಚಿಗೆ ಪಾವತಿ ಮಾಡಲಾದ ಬಡ್ಡಿ ಹಣವನ್ನು ವಸೂಲಾತಿ ಮಾಡಲು ಸಮಿತಿಯು ಸಲ್ಲಿಸಿದ ವರದಿಯನ್ವಯ ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲು ಠರಾಯಿಸಿತು.**

A. Channappa
ಕುಲಸಚಿವರು



ಕುಲಪತಿಗಳು

**ಕಲಂ ಸಂಖ್ಯೆ–26: ವಿಷಯ–:** ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠದಲ್ಲಿ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸುತ್ತಿರುವ ವಕೀಲರು ವೃತ್ತಿಶುಲ್ಕ ಪರಿಷ್ಕರಣೆಗೆ ಸಂಬಂಧಿಸಿದಂತೆ ಸಲ್ಲಿಸಿದ ಮನವಿಯನ್ನು ಪರಿಶೀಲಿಸುವ ಕುರಿತು

**ಟಿಪ್ಪಣಿ:**

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠದಲ್ಲಿ ವಿಶ್ವವಿದ್ಯಾಲಯದ ವಿರುದ್ಧ/ ಪರವಾಗಿ ದಾಖಲಾಗುವ ಪ್ರಕರಣಗಳಲ್ಲಿ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸುತ್ತಿರುವ ಸಿಂಡಿಕೇಟ್‌ನಿಂದ ಒಪ್ಪಿಗೆ ಪಡೆದ ವಕೀಲರ ಪಟ್ಟಿಯಲ್ಲಿರುವ ಕೆಲ ವಕೀಲರು ದಿನಾಂಕ 01.03.2024ರಂದು ಮನವಿ ಸಲ್ಲಿಸಿ, ಈಗ ವಿಶ್ವವಿದ್ಯಾಲಯವು ಪ್ರಸ್ತುತ ಪಾವತಿಸುತ್ತಿರುವ ವೃತ್ತಿಶುಲ್ಕವಾವು ಪ್ರತಿ ಪ್ರಕರಣದಲ್ಲಿ ಭರಿಸುತ್ತಿರುವ ಖರ್ಚಿನ ಮೊತ್ತಕ್ಕೆ ಅನುಗುಣವಾಗಿ ತುಲನಾತ್ಮಕವಾಗಿ ತುಂಬಾ ಕಡಿಮೆ ಇರುವುದರಿಂದ ಈ ಕೆಳಗೆ ಕಾಣಿಸಿದಂತೆ ವೃತ್ತಿಶುಲ್ಕವನ್ನು ಪರಿಷ್ಕರಿಸಬೇಕೆಂದು ವಿನಂತಿಸಿದ್ದಾರೆ.

| Sl. No. | Nature of Case | Fees proposed |
|---|---|---|
| 1 | Legal Fees for appearing before the Dharwad High Court in any case on behalf of University as respondent in any petition Application/ Appeal/ Revision etc | Rs. 20000./- |
| | Case expenses. | @ Rs. 25% |
| 2 | Legal Fees for appearing before the Dharwad High Court in any case on behalf of University as Petitioner/ applicant in any petition Application/ Appeal/ Revision etc | Rs. 30,000/- |
| | Case expenses. | @ Rs. 25% |
| 3 | Filing Caveat in High Court on behalf of KU Dharwad | Rs. 10,000/- |
| | Case expenses. | @ Rs. 20% |
| 4 | Legal Opinions in the matters referred by KUD | Rs. 5,000/- |
| 5 | Legal Fees for appearing before the Bangalore High Court in any case on behalf of University as respondent in any Petition Application/ Appeal/ Revision etc | Rs. 40,000/- |
| | TA/DA as actual and Case Expenses | @ Rs. 30% |

ಈ ಸಂಬಂಧದಲ್ಲಿಇಲ್ಲಿ ನಮೂದಿಸಬೇಕಾದ ಅಂಶವೇನೆಂದರೆ, ಮಾನ್ಯ ಸಿಂಡಿಕೇಟ್ ಸಭೆಯ ಠರಾವು ಸಂಖ್ಯೆ 07 ದಿನಾಂಕ 12.01.2016ರಂತೆ ಮಾನ್ಯ ಉಚ್ಚ ನ್ಯಾಯಾಲಯ/ ಮಾನ್ಯ ಸರ್ವೋಚ್ಚ ನ್ಯಾಯಾಲಯ ಹಾಗೂ ವಿಚಾರಣಾ ನ್ಯಾಯಾಲಯಗಳಲ್ಲಿ ವಿಶ್ವವಿದ್ಯಾಲಯದ ವಿರುದ್ಧ/ ಪರವಾಗಿದಾಖಲಾಗುವ ಪ್ರಕರಣಗಳಲ್ಲಿ ವಕೀಲರಿಗೆ ಪಾವತಿಸುತ್ತಿರುವ ವೃತ್ತಿಶುಲ್ಕ ಸದರ ಸಿಂಡಿಕೇಟ್ ಠರಾವು ಆಧರಿಸಿ ವಿಶ್ವವಿದ್ಯಾಲಯವು ಹೊರಡಿಸಿದ ಸುತ್ತೋಲೆ ದಿನಾಂಕ 05.02.2016 (ಪ್ರತಿ ಲಗತ್ತಿಸಿದೆ) ರಂತೆಇರುತ್ತದೆ. ಇದಲ್ಲದೇ, ವಿಶ್ವವಿದ್ಯಾಲಯದ ವತಿಯಿಂದ ಕೇವಿಯಟ್ ದಾಖಲಿಸುವಲ್ಲಿ, ಕಾನೂನುಬದ್ಧ ನೋಟಿಸಿಗೆ ವಿಶ್ವವಿದ್ಯಾಲಯದ ವಕೀಲರಿಂದ ಉತ್ತರ ನೀಡುವಲ್ಲಿ, ಪೋಲೀಸರಲ್ಲಿ ದೂರು ದಾಖಲಿಸುವ ಸಂಬಂಧದಲ್ಲಿ ಮುಂತಾದವುಗಳಲ್ಲಿ ಪಾವತಿಸುವ ವೃತ್ತಿಶುಲ್ಕವನ್ನು ಸಹ ನಿಗದಿ ಪಡಿಸಲಾಗಿದೆ. 2016 ಸಾಲಿನ ನಂತರ ಈ ವರೆಗೆ ಸದರ ವೃತ್ತಿಶುಲ್ಕವನ್ನು ಪರಿಷ್ಕೃತಗೊಳಿಸಿರುವುದಿಲ್ಲ. ಈ ಪರಿಷ್ಕರಣೆ ಕುರಿತಂತೆ ವಕೀಲರ ಮನವಿಯನ್ನು ದಿ. 07.03.2024 ರಂದು ಮಂಡಿಸಲಾಗಿತ್ತು. ಸಿಂಡಿಕೇಟ್ ತನ್ನ ಠರಾವು ಸಂಖ್ಯೆ 33 ರಲ್ಲಿ ಈ ಕೆಳಗೆ ಕಾಣಿಸಿದಂತೆ ನಿರ್ಣಯಿಸಿತು.

***"ಸಿಂಡಿಕೇಟ್ ನಿರ್ಣಯ ಸಂಖ್ಯೆ 33 ದಿ. 07.03.2024***

*ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸುತ್ತಿರುವ ವಕೀಲರು ವೃತ್ತಿ ಶುಲ್ಕ ಪರಿಷ್ಕರಣೆಗೆ ಸಂಬಂಧಿಸಿದಂತೆ ಸಲ್ಲಿಸಿದ ಮನವಿಯನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ವೃತ್ತಿ ಶುಲ್ಕ ಪರಿಷ್ಕರಿಸಲು ವಿವಿಧ ವಿಶ್ವವಿದ್ಯಾಲಯಗಳಲ್ಲಿ ನಿಗದಿಪಡಿಸಿದ ಮತ್ತು ಸರ್ಕಾರದ ಇಲಾಖೆಗಳಲ್ಲಿ ನಿಗದಿಪಡಿಸಿದ ಮಾಹಿತಿ ಅವಶ್ಯವಿರುವುದರಿಂದ ಸದರಿ ಮಾಹಿತಿಯನ್ನು ಪಡೆದು ಮುಂಬರುವ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ತಿಳಿಸಿತು. "*



ಕುಲಸಚಿವರು

ಕುಲಪತಿಗಳು

ಅದರಂತೆ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಮತ್ತು ಸರ್ಕಾರದ ಇಲಾಖೆಗಳಲ್ಲಿ ವಕೀಲರಿಗೆ ಪಾವತಿಸುತ್ತಿರುವ ಮಾಹಿತಿ ಕೋರಲಾಗಿ ಕೆಲ ವಿಶ್ವವಿದ್ಯಾಲಯಗಳು ಹಾಗೂ ಕರ್ನಾಟಕ ಲೋಕ ಸೇವಾ ಆಯೋಗವು ಸ್ಪಂದಿಸಿದ್ದು, ಅವುಗಳು ಸಲ್ಲಿಸಿದ ಮಾಹಿತಿ ಆಧರಿಸಿ ವಿವಿಧ ನ್ಯಾಯಾಲಯಗಳಲ್ಲಿ ವಕೀಲರಿಗೆ ಪಾವತಿಸುತ್ತಿರುವ ವೃತ್ತಿಶುಲ್ಕದ ತುಲನಾತ್ಮಕ ಪಟ್ಟಿಯನ್ನು ಸಿಂಡಿಕೇಟ್ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸಲಾಯಿತು.

### ನಿರ್ಣಯ

